ಅಧ್ಯಾಯ-೧೦

## ನ್ಯಾಯಾಡಳಿತ

ಕರ್ನಾಟಕದಲ್ಲಿ ನ್ಯಾಯಾಡಳಿತವು ದೇಶದ ಇತರ ರಾಜ್ಯದಲ್ಲಿದ್ದಂತೆ ರಾಜನ ಮೂಲಭೂತವಾದ ಮತ್ತು ಅವಶ್ಯಕ ಕಾರ್ಯ ಭಾಗಗಳಲ್ಲಿ ಒಂದಾಗಿತ್ತು. ದುಷ್ಟರಿಗೆ ಶಿಕ್ಷೆ, ಶಿಷ್ಟ ರಕ್ಷಣೆ ನ್ಯಾಯಮಾರ್ಗದಿಂದ ಖಜಾನೆಯನ್ನು ಸಮೃದ್ಧಿಗೊಳಿಸುವುದು, ವಾದಿಗಳಿಗೆ ನಿಷ್‌ಪಕ್ಷವಾದ ನ್ಯಾಯ ಪ್ರಧಾನ ಮತ್ತು ರಾಜ್ಯರಕ್ಷಣೆ. ಇವು ರಾಜನಿಗೆ ವಿಧಿಸಿದ ಐದು ಬಗೆಯ ಕರ್ತವ್ಯಗಳಾಗಿದ್ದವು. ಸ್ಮೃತಿಕಾರರಾದ ಮನು, ಯಾಜ್ಞವಲ್ಕ್ಯ, ಪರಾಶರ, ನಾರದ, ಬೃಹಸ್ಪತಿ, ಕಾತ್ಯಾಯನ ಮತ್ತು ಕೌಟಿಲ್ಯ ಇವರ ಕೃತಿಗಳಲ್ಲಿ ರಾಜಧಾನಿಯಲ್ಲಿರುವ ಅತ್ಯುನ್ನತ ನ್ಯಾಯಾಲಯದ ಮತ್ತು ರಾಜಾಧಿಕಾರದ ಮೇರೆಗೆ ಸ್ಥಾಪಿತವಾದ ಕೆಳನ್ಯಾಯಾಲಯಗಳ ರಚನೆ ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದ ವಿಸ್ತಾರವಾದ ನಿಯಮಗಳನ್ನು ಅಳವಡಿಸಲಾಗಿದೆ. ನಿಯಮಗಳು ವಿವಾದಗಳನ್ನು ತೀರ್ಮಾನಿಸುವ ಜನತಾ ನ್ಯಾಯಾಲಯಗಳನ್ನು ಮನ್ನಿಸುವ ಬಗ್ಗೆ ಉಪಬಂಧಗಳನ್ನು ಒಳಗೊಂಡಿವೆ.

ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವನ್ನು ಒಳಗೊಂಡ (ವ್ಯವಹಾರ) ಧರ್ಮ ಎಂಬ ಅಭಿವ್ಯಕ್ತಿಯನ್ನು ಬೃಹದಾರಣಕ ಉಪ ನಿಷತ್ತಿನಲ್ಲಿ "ನ್ಯಾಯವು ರಾಜನಿಗೆ ರಾಜ, ನ್ಯಾಯಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ. ರಾಜಸತ್ತೆಯ ನೆರವಿನಿಂದ ಅದು ದುರ್ಬಲರೂ ಕೂಡ ಬಲಿಷ್ಟರನ್ನು ಬಗ್ಗಿಸುವಂತೆ ಮಾಡುತ್ತದೆ ಎಂದು ಪರಿಭಾಷಿಸಲಾಗಿದೆ. ಪ್ರಾಚೀನ ಸಮಾಜದಲ್ಲಿ ವಿಕಾಸಗೊಂಡು ಅಭಿವೃದ್ಧಿಯಾದ ನ್ಯಾಯವ್ಯವಸ್ಥೆಯು ಮತ್ತು ಇದರ ಮೂಲ ತತ್ವಗಳು ಪ್ರಭಾವಶಾಲಿಯಾಗಿದ್ದು ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ನ್ಯಾಯಾಡಳಿತಕ್ಕೆ ಮೂಲಾಧಾರವನ್ನೂ, ಸ್ಫೂರ್ತಿಯನ್ನೂ ನೀಡಿವೆ. ಗುಲಬರ್ಗಾ ಜಿಲ್ಲೆಯಲ್ಲಿಯೂ ಪ್ರಾಚೀನ ಕಾಲದಲ್ಲಿ ಈ ರೀತಿಯ ನ್ಯಾಯಾಡಳಿತವಿದ್ದು, ನಂತರದ ಅರಸರ ಕಾಲದಲ್ಲಿ ಸ್ವಲ್ಪ ಬದಲಾವಣೆಗಳಾದವು ಆದರಂತೆ ಬಹಮನ್ ಷಾಹಿಕಾಲದಲ್ಲಿ ರಾಜನು ಕೇವಲ ರಾಜ್ಯಾಧಿಪತಿಯಷ್ಟೇ ಅಲ್ಲದೆ ನ್ಯಾಯಾಧೀಶನೂ, ಸೇನಾನಾಯಕನೂ ಮತ್ತು ಸಾರ್ವಜನಿಕ ಧರ್ಮಾಧಿಕಾರಿಯೂ ಆಗಿದ್ದನು. ಡಾ. ಪಿ. ಎಂ. ಜೋಷಿಯವರು ಸಿವಿಲ್ ವಿಭಾಗದಲ್ಲಿ 'ನಾಜಿರ' ಮತ್ತು ಕೊತ್ವಾಲ್ ಎಂಬ ಹಿರಿಯ ಮಂತ್ರಿಗಳಿದ್ದುದನ್ನು ಪ್ರಸ್ತಾಪಿಸಿರುತ್ತಾರೆ. ಇವರಲ್ಲಿ ಮೊದಲನೆಯವನು ಮುಖ್ಯ ಲೇಖಾಧಿಕಾರಿಯೂ ಮತ್ತು ಮತ್ತೊಬ್ಬನು ಪೋಲೀಸ್ ಬಲದ ಮುಖ್ಯಾಧಿಕಾರಿಯೂ ಮತ್ತು ವಿಶೇಷ ಮ್ಯಾಜಿಸ್ಟ್ರೇಟನೂ ಆಗಿದ್ದರು. ಮುಖ್ಯ ನ್ಯಾಯಾಧೀಶನನ್ನು ಸದರ್-ಎ-ಜಹಾಂ ಎಂದು ಕರೆಯುತ್ತಿದ್ದರು. ಬಿಜಾಪುರದ ಅದಿಲ್ ಷಾಹಿ ಕಾಲದಲ್ಲಿ ರಾಜನು ಆಡಳಿತದ ಪರಮಾಧಿಕಾರಿಯಾಗಿದ್ದನು. ಅವನು ನ್ಯಾಯದ ಪ್ರಮುಖ ಮೂಲವೆನಿಸಿ ಕೊಂಡಿದ್ದನು.

ನ್ಯಾಯ ವಿಭಾಗಕ್ಕೆ ಒಬ್ಬ ಮಂತ್ರಿ ಅಥವಾ **ಸದರ್-ಎ-ಜಹಾಂ** ಇರುತ್ತಿದ್ದನು. ನ್ಯಾಯಾಡಳಿತದಲ್ಲಿ ಅಧಿಕಾರಿಗೆ **ಕೊತ್ವಲ್** ಎಂದು ಕರೆಯುತ್ತಿದ್ದರು. **ವಕೀಲ್-ಎ-ದಾರ್** ಅಥವಾ **ಕಾರಭಾರಿ** ಎಂಬ ಮತ್ತೊಂಬ್ಬ ಅರಮನೆ ಅಧಿಕಾರಿ ಇದ್ದನು. ಸಿವಿಲ್ ನ್ಯಾಯ ವಿಷಯದಲ್ಲಿ ಹಿಂದೂ ನ್ಯಾಯ ಪದ್ಧತಿಯನ್ನು ಅನುಸರಿಸಲಾಗುತ್ತಿತ್ತು. ಮತ್ತು ಹಿಂದೂ ನ್ಯಾಯವೇತ್ತರ ಸಲಹೆ ಪಡೆಯಲಾಗುತ್ತಿತ್ತು. ಒಂದು ಕಡೆಗೆ ಒಬ್ಬ ಮುಸ್ಲಿಮನು ಮತ್ತೊಂದು ಕಡೆಗೆ ಒಬ್ಬ ಹಿಂದೂ ಇಬ್ಬರ ನಡುವೆ ಅಥವಾ ಇಬ್ಬರು ಮುಸ್ಲಿಮರ ನಡುವೆ ಉಂಟಾದ ವಿವಾದದಲ್ಲಿ ಇಸ್ಲಾಮಿ ನ್ಯಾಯ ಮಂಡಳಿಗಳು ತಮ್ಮದೇ ಆದ ಪ್ರತ್ಯೇಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಿದ್ದವು. ಕ್ರಿಮಿನಲ್ ನ್ಯಾಯಾಲಯದಲ್ಲಿ ಇಸ್ಲಾಮಿ ಪದ್ಧತಿಯೇ ಪ್ರಚಲಿತವಿದ್ದಿತು.

ಡೆಕ್ಕನ್ ಪ್ರಾಂತ್ಯಗಳಲ್ಲಿ ೧೭೨೪ರ ಮೊದಲಿಗೆ ಪ್ರಚಲಿತವಿದ್ದ, ನ್ಯಾಯಾಡಳಿತದ ವಿವರಣೆ ಹೀಗಿತ್ತು. ಮೊಗಲ್ ಪ್ರಾಂತ್ಯಗಳು ಸಿವಿಲ್ ಆಡಳಿತಕ್ಕಾಗಿ ಇಂಪೀರಿಯರ್ ಕ್ಯಾಪಿಟಲ್, ಸುಭಾಗಳು, (ಪ್ರಾವಿನ್ಸ್‌ಗಳು) ಸರ್ಕಾರ್ (ಜಿಲ್ಲೆಗಳು) ಪರಗಾನಾಸ್ ಮತ್ತು ಗ್ರಾಮಗಳು, ಎಂಬುದಾಗಿ ವಿಂಗಡಿಸಿದ್ದರು. ಮೊಗಲ್ ದೊರೆಯು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗೂ ಮಿಲಿಟರಿ ಅಧಿಕಾರಿಗಳ ಪ್ರಮುಖ ಅಧಿಕಾರಿಯಾಗಿದ್ದನು. ಈತನನ್ನು ನ್ಯಾಯಾಂಗ ಇಲಾಖೆಯ **(ಮಹಿಕಾಮ-ಒ-ಆದಾಲತ್)** ಮುಖ್ಯಸ್ಥನಾಗಿ ನೇಮಿಸಲಾಗುತ್ತಿತ್ತು. ಪ್ರತಿ ಗ್ರಾಮ ಹಾಗೂ ಪರಗನಾಗಳಲ್ಲಿ ಸಿವಿಲ್, ಕ್ರಿಮಿನಲ್ ಮತ್ತು ಕಂದಾಯಕ್ಕೆ ಸಂಬಂದಪಟ್ಟ ಮೊಕದ್ದಮೆಗಳನ್ನು ತೀರ್ಮಾನಿಸಲು ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿತ್ತು. ಗುಲಬರ್ಗಾವು ಸೇರಿದಂತೆ ಪ್ರತಿ ಜಿಲ್ಲೆಯಲ್ಲಿ **ಕ್ವಾಝಿ-ಎ-ಸರ್ಕಾರ್** ಅಥರಾ **ಶರಿಯತಪನಾ** ಮುಖ್ಯಸ್ಥರಾಗಿದ್ದು ಮುಖ್ಯ **ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯ, ಫೌಜದಾರಿ ಆದಾಲತ್, ಕೊತಾವಲಿ** ಮತ್ತು **ಅಮಲ್ ಗುಝುರಿ** ಕಛೇರಿ ಎಂಬ ನಾಲ್ಕು ನ್ಯಾಯಾಲಯಗಳಿದ್ದವು. **ಕ್ವಾಝಿ-ಎ-ಸರ್ಕಾರ್**-ನ ಅಧೀನದಲ್ಲಿ ಆರು ಅಧಿಕಾರಿಗಳು ಇದ್ದರು. ಅವರುಗಳೆಂದರೆ - **ದರೋಗಾ-ಎ-ಆದಾಲತ್, ಮಿರ್ ಆದಿಲ್, ಮುಫ್ತಿ, ಪಂಡಿತ** ಅಥವಾ **ಶಾಸ್ತ್ರಿ ಮೊಹಾಸಿಬ್** ಮತ್ತು **ವಕೀಲ್-ಎ-ಶಿಕಾಯಿ.** ಜಿಲ್ಲೆಯಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ಮುಖ್ಯಸ್ಥರು **ಕ್ವಾಝಿ-ಎ-ಸರ್ಕಾರ್** ಆಗಿದ್ದು,ಇವರು ಮತೀಯ ಮೊಕದ್ದಮೆಗಳನ್ನು ನಿರ್ವಹಿಸುತ್ತಿದ್ದರು. **ಫೌಜದಾರಿ-ಎ-ಬಲ್ದಿ** ಇವರು, ಜಿಲ್ಲೆಯ ರಕ್ಷಣೆಯನ್ನು ಮಾಡುತ್ತಿದ್ದರು. ಕೊತವಾಲಿ ನ್ಯಾಯಾಲಯವು ಇತ್ತೀಚಿನ ಪೋಲೀಸ್ ಕಾಯ್ದೆಯಲ್ಲಿರುವಂತೆ, ಮೊಕದ್ದಮೆಗಳನ್ನು ನಿರ್ವಹಿಸುತ್ತಿದ್ದರು. **ಅಮಲ್‌ಗುಝುರಿ ಕಛೇರಿಯು** ಕಂದಾಯಕ್ಕೆ ಸಂಬಂಧಪಟ್ಟ ಮೊಕದ್ದಮೆಗಳನ್ನು **ಆದಾಲತ್-ಎ-ಪರಗನಾ** (ಪರಗನಾ ನ್ಯಾಯಾಲಯ) ಇವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳ ಮೂಲ ದಾವೆಗಳನ್ನು, ತೀರ್ಮಾನಿಸುತ್ತಿದ್ದವು.

ಪ್ರಾಚೀನ ಹಿಂದೂರಾಜರ ಪದ್ಧತಿಯಲ್ಲಿ ಇದ್ದ, ದಿವ್ಯಗಳನ್ನು ಮುಸಲ್ಮಾನ್ ರಾಜರು ಹೆಚ್ಚು ಅಳವಡಿಸಿದಂತೆ ಕಾಣುವುದಿಲ್ಲ. ಪ್ರಮುಖವಾದ ಎರಡು ಮಹಮ್ಮದೀಯ ನಿಯಮಗಳು ಅಂದರೆ **ಫಿಕ್-ಇ-ಫೈರೆಸ್ ಶಾಹಿ** ಮತ್ತು **ಫಟ್ಟ-ಎ-ಅಲಮಗಿರಿ** ಜಾರಿಯಲ್ಲಿದ್ದವು.

೧೮೬೫ರಲ್ಲಿ ನಿಜಾಮನ ಅಧಿಪತ್ಯವು ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟವು. ೧೮೭೦ರಲ್ಲಿ ಕಂದಾಯ ಅಧಿಕಾರಿಗಳು ಅದುವರೆಗೆ ಚಲಾಯಿಸುತ್ತಿದ್ದ ಸಿವಿಲ್ ಮೊಕದ್ದಮೆಗಳನ್ನು ತೀರ್ಮಾನಿಸುವ ಅಧಿಕಾರವನ್ನು ತಹಸೀಲ್‌ದಾರರನ್ನೂ ಹೊರತು ಉಳಿದವರಿಂದ ಹಿಂತೆಗೆದುಕೊಳ್ಳಲಾಯಿತು. ತಾಲೂಕು ಮುಖ್ಯ ಪಟ್ಟಣದಲ್ಲಿ ಸಿವಿಲ್ ನ್ಯಾಯಾಲಯ ಗಳಿಲ್ಲದಿದ್ದ ಕಾರಣ ತಹಶೀಲ್‌ದಾರರು ಈ ಕಾರ್ಯವನ್ನು ಮಾಡುತ್ತಿದ್ದರು. ಅಪರಾಧ ಮೊಕದ್ದಮೆಗಳನ್ನು ತಾಲೂಕುದಾರ ಮತ್ತು ಪೋಲೀಸ್ ಪಾಟೀಲರು ತೀರ್ಮಾನಿಸುತ್ತಿದ್ದರು. ಗುಲಬರ್ಗಾದ ಸುಬೇದಾರರು ತಮ್ಮ ಕಂದಾಯ ಅಧಿಕಾರದವಲ್ಲದೆ ನ್ಯಾಯಾಡಳಿತದ ಪ್ರಮುಖ ಅಧಿಕಾರಿಯಾಗಿದ್ದರು. ಏಪ್ರಿಲ್ ೧೯೫೧ರ ನಂತರ ಈ ಸುಭಾ ನ್ಯಾಯಾಲಯವನ್ನು ರದ್ದುಮಾಡಿ ಪ್ರತಿ ಜಿಲ್ಲೆಗೆ ಒಂದು ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ನಂತರದ ವರ್ಷಗಳಲ್ಲಿ ನ್ಯಾಯಾಡಳಿತದ ಮತ್ತು ಕಾರ್ಯಾಡಳಿತದ ಕಾರ್ಯಗಳನ್ನು ತಾಲೂಕು ಮಟ್ಟದಲ್ಲಿ ಬೇರ್ಪಡಿಸಿ ಸಾಧ್ಯವಿದ್ದೆಡೆಯಲ್ಲೆಲ್ಲಾ ಒಬ್ಬ ಸಂಪೂರ್ಣ ಕಾಲದ ನ್ಯಾಯಾಧಿಕಾರಿಯನ್ನು ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರಗಳೊಂದಿಗೆ ನೇಮಿಸಿಲಾಯಿತು. ಹಾಗೆಯೇ ಪ್ರತಿ ಜಿಲ್ಲೆಗೂ ಒಬ್ಬ ಜಿಲ್ಲಾ ನ್ಯಾಯಾಧೀಶನನ್ನು ನೇಮಕ ಮಾಡಲಾಯಿತು.

ಕೆಲವು ವರ್ಷಗಳ ನಂತರ **ಫರ್ಮಾನ್** ರವರಿಂದ ಒಂದು ಪ್ರತ್ಯೇಕ ಯೋಜನೆಯನ್ನು ಕಾರ್ಯಗತಗೊಳಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ವರದಿಯಂತೆ ಸಿವಿಲ್ ಮತ್ತು ಕ್ರಿಮಿನಲ್ ದಾವೆಗಳು

ತೆಗೆದುಕೊಳ್ಳುತ್ತಿದ್ದ ಸಮಯ ಕಡಿಮೆ ಆಗುವುದು ಕಂಡು ಬಂದಿತು. ಜಿಲ್ಲಾ ಮಟ್ಟದಲ್ಲಿ ಸಿವಿಲ್ ನ್ಯಾಯಾಧೀಶರುಗಳಿಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಲಘು ಅಪರಾಧಗಳನ್ನು ತೀರ್ಮಾನಿಸುವ ಅಧಿಕಾರವನ್ನೂ ಕೊಡಲಾಯಿತು.

೧೯೩೨ರಲ್ಲಿ ಜೂರಿ ಪದ್ಧತಿಯನ್ನು ಜಿಲ್ಲೆಯಲ್ಲಿ (ಹೈದರಾಬಾದ್ ಸಂಸ್ಥಾನದಲ್ಲಿ) ಜಾರಿಗೆ ತರಲಾಯಿತು.

ಈ ನ್ಯಾಯಾಲಯಗಳಲ್ಲದೆ **ಸರ್ಫ್-ಎ-ಖಾಸ್, ಮುಬಾರಕ್ ಪೈಗಾ** ಮತ್ತು **ಜಾಗೀರ್‌ಗಳು** ಹೈದರಾಬಾದಿನ ಉಚ್ಚ ನ್ಯಾಯಾಲಯದ ಆಧೀನದಲ್ಲಿ ತಮ್ಮದ್ರೇ ನ್ಯಾಯಾಲಯಗಳನ್ನು ಹೊಂದಿ ನ್ಯಾಯ ತೀರ್ಮಾನ ಮಾಡುತ್ತಿದ್ದವು.

ಇಂದಿನ ಗುಲಬರ್ಗಾ ಜಿಲ್ಲೆಯು ಹಿಂದಿನ ಹೈದರಾಬಾದ್ ರಾಜ್ಯದ ಆಡಳಿತ ಭಾಗವಾಗಿತ್ತು. ೧೮೬೬ರಲ್ಲಿ ಹೈದಾರಾಬಾದ್ ರಾಜ್ಯದ ಆಡಳಿತ ವಿಭಾಗಗಳನ್ನು ನಿಜಾಮರು ಪುನಃ ರಚಿಸಿದರು. ಇದಕ್ಕೂ ಪೂರ್ವದಲ್ಲಿ ಸಿವಿಲ್ (ದಿವಾನಿ) ವಿವಾದಗಳನ್ನು ತೀರ್ಮಾನಿಸುವ ಅಧಿಕಾರಗಳನ್ನು ಕಂದಾಯ ಅಧಿಕಾರಿಗಳಿಗೆ ವಹಿಸಿ ಕೊಡಲಾಗಿತ್ತು. ನಂತರ ಈ ಅಧಿಕಾರಗಳನ್ನು ಅವರಿಂದ ಬೇರ್ಪಡಿಸಿ ನೂತನವಾಗಿ ಸ್ಥಾಪಿಸಿದ ಸಿವಿಲ್ ನ್ಯಾಯಾಲಯಗಳಿಗೆ ವಹಿಸಲಾಯಿತು. ತಹಸೀಲ್ ಮಟ್ಟದಲ್ಲಿ ತಹಶೀಲ್‌ದಾರರು ಸಿವಿಲ್ ಪ್ರಕರಣಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಕ್ರಿಮಿನಲ್ ಫೌಜದಾರಿಗಳಲ್ಲಿ ತಾಲೂಕುದಾರರು ಮತ್ತು ಪೋಲೀಸ್ ಪಟೇಲರು ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸುತ್ತಿದ್ದರು. ಗುಲಬರ್ಗಾ ವಿಭಾಗದ ಸುಬೇದಾರರು ಆ ವಿಭಾಗದಲ್ಲಿ ಅತ್ಯುನ್ನತ ಕ್ರಿಮಿನಲ್ ನ್ಯಾಯಾಧೀಶರಾಗಿ ಅಧಿಕಾರ ಚಲಾಯಿಸುತ್ತಿದ್ದರು. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವ ಯೋಜನೆಯನ್ನು ೧೯೨೨ರಲ್ಲಿ ಸಿದ್ಧಗೊಳಿಸಿ ಜಾರಿಗೆ ತರಲಾಯಿತು. ಪ್ರತಿಯೊಂದು ತಹಶೀಲಿಗೆ ಒಬ್ಬ ಮುನ್ಸಿಫ್ ಮ್ಯಾಜಿಸ್ಟ್ರೇಟರನ್ನು ನೇಮಿಸಲಾಯಿತು. ಕ್ರಿಮಿನಲ್ ವಿಭಾಗದಲ್ಲಿ ಅವರಿಗೆ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ನೀಡಲಾಗಿತ್ತು. ಕಂದಾಯ ಅಧಿಕಾರಿಗಳಿಂದ ನ್ಯಾಯಿಕ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಹಿಂತೆಗೆದುಕೊಳ್ಳಲಾಗಿತ್ತು. ೧೯೩೨ರಲ್ಲಿ ಜೂರಿ ಪದ್ಧತಿಯನ್ನು ಜಾರಿಗೆ ತರಲಾಯಿತು. ಜಿಲ್ಲೆಯ ಮತ್ತು ಉಪವಿಭಾಗದ ಪ್ರಭಾರ ಹೊಂದಿರುವ ಪ್ರಥಮ ತಾಲೂಕುದಾರ ಮತ್ತು ದ್ವಿತೀಯ ತಾಲೂಕುದಾರರಿಗೆ ಕ್ರಮವಾಗಿ ಕಾನೂನು ಸುವ್ಯವಸ್ಥೆಯನ್ನು ಪಾಲನೆ ಮಾಡುವ ಉದ್ದೇಶಕ್ಕಾಗಿ ಕಾರ್ಯಾಂಗ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ನೀಡಲಾಗಿತ್ತು. ಇವುಗಳಲ್ಲದೆ **ಸರ್ಫೆಖಾಸ- ಮುಬಾರಕ, ಪೈಗಾ ಮತ್ತು ಜಾಗೀರುಗಳು** ತಮ್ಮದ್ರೇ ಆದ ನ್ಯಾಯಾಲಯಗಳನ್ನು ಹೊಂದಿದ್ದವು. ಮತ್ತು ಪ್ರತ್ಯೇಕ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದವು.

ನಿಜಾಮನ ಆಳ್ವಿಕೆಯಲ್ಲಿ ಬೇರೆ ಬೇರೆ ಆಡಳಿತಾತ್ಮಕ ದಳಗಳು ಕಾರ್ಯಾಚರಣೆಯಲ್ಲಿದ್ದವು. ಪ್ರಾರಂಭದಲ್ಲಿ ಅದು ಒಂದು ಸ್ವಾತಂತ್ರ್ಯ ರಾಜ್ಯವಾಗಿದ್ದು, ರಾಜನು ಬ್ರಿಟಿಷರ ಆಳ್ವಿಕೆಯಲ್ಲಿ ವಿಶೇಷ ಸೌಲಭ್ಯಗಳನ್ನು ಹೊಂದಿದ್ದ ದೊರೆಯಾಗಿದ್ದನು. ಹಿಂದೂಗಳ ಜನಸಂಖ್ಯೆ ಹೆಚ್ಚಿದ್ದರೂ, ಮುಸಲ್ಮಾನರು ಆಡಳಿತ ನಡೆಸುತ್ತಿದ್ದರು. ಹಾಗೂ ಅವರಿಗೆ ಹೆಚ್ಚಿನ ಸವಲತ್ತುಗಳಿದ್ದವು. ಹಿಂದುಗಳಿಗೆ ಪೌರಹಕ್ಕುಗಳು ಇಲ್ಲದಂತಾಗಿತ್ತು. ಯಾವುದೇ ಸಾಂಸ್ಕೃತಿಕ, ಸಾಹಿತ್ಯ ಸಂಸ್ಥೆಗಳನ್ನು ಸಂಶಯದ ದೃಷ್ಟಿಯಿಂದ ನೋಡಲಾಗುತ್ತಿತ್ತು. ಬ್ರಿಟಿಷ್ ಸರ್ಕಾರವು ಭಾರತವನ್ನು ಬಿಟ್ಟು ಹೊರಟ ನಂತರ, ನಿಜಾಮನು ಸ್ವತಂತ್ರ್ಯ ಅಧಿಕಾರಿ ಹೊಂದಿದವನಾಗಿದ್ದು, ಹೈದರಾಬಾದ್ ಪ್ರದೇಶಕ್ಕೆ ಸ್ವಾತಂತ್ರ್ಯ ಭಾರತದಲ್ಲಿನ ಸವಲತ್ತನ್ನು ಕೊಡಲು ಇಷ್ಟಪಡಲಿಲ್ಲ. ಶ್ರೀ ರಾಮಾನಂದ ತೀರ್ಥರು ಆ ಸಮಯದಲ್ಲಿ ಜನ ಜಾಗೃತಿಯನ್ನು ಮೂಡಿಸಿ ೧೯೪೭ನೇ ಆಗಸ್ಟ್ ೭ ರಂದು ಚಳುವಳಿ ಪ್ರಾರಂಭಿಸಿದರು. ೧೯೪೭-೪೮ರಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಜನರು ಹೆಚ್ಚು ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು. ರಜಾಕಾರ್ ಎಂಬ ಖಾಸಗಿ ಪಡೆಗೆ ಸರ್ಕಾರವು ದಬ್ಬಾಳಿಕೆ ನಡೆಸಲು ಪರವಾನಗಿ ಕೊಟ್ಟಂತೆ ಪರಿಸ್ಥಿತಿ ಇದ್ದಿತ್ತು. ೧೯೪೮ ಸೆಪ್ಟೆಂಬರ್ ೧೭ ರಂದು ಸರ್ಕಾರವು ಪೋಲೀಸ್ ಕಾರ್ಯಾಚರಣೆ ನಡೆಸಿದ ನಂತರ ಹೈದರಾಬಾದ್ ಪ್ರಾಂತ್ಯವು ನಿಜಾಮನ ಅಧಿಪತ್ಯದಿಂದ ಬಿಡುಗಡೆಯಾಯಿತು. (ಅಧ್ಯಾಯ ೨ ನೋಡಿ)

೧೯೫೧ಕ್ಕೆ ಮೊದಲು ಜಿಲ್ಲೆಯಲ್ಲಿ ಒಂದೇ ಒಂದು ಜಿಲ್ಲಾ ನ್ಯಾಯಾಲಯವಿದ್ದಿತು. ಇದರ ವ್ಯಾಪ್ತಿ ಗುಲಬರ್ಗಾ ಸುಬಾ ಎಂದರೆ, ಗುಲಬರ್ಗಾ, ರಾಯಚೂರು, ಬೀದರ್, ಉಸ್ಮಾನಾಬಾದ್ ಜಿಲ್ಲೆಗಳಾಗಿತ್ತು. ಗುಲಬರ್ಗಾ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರು ನಾಲ್ಕು ಜಿಲ್ಲೆಗಳಿಗೆ ನ್ಯಾಯಾಧಿಕಾರಿ ಆಗಿದ್ದರು.

೧೯೬೬ರ ಹೊತ್ತಿಗೆ ಜಿಲ್ಲೆಯಲ್ಲಿನ ನ್ಯಾಯಾಡಳಿತ ಪದ್ಧತಿ ಈ ರೀತಿ ಇದ್ದಿತು. ಜಿಲ್ಲೆಯಲ್ಲಿ ನ್ಯಾಯಾಡಳಿತದ ಉನ್ನತ

ಅಧಿಕಾರಿ ಜಿಲ್ಲಾ ನ್ಯಾಯಾಧೀಶರು ಆಗಿದ್ದರು. ಇವರು ಸತ್ರ ನ್ಯಾಯಾಧಿಕಾರಿಯೂ ಆಗಿದ್ದು ರಾಜ್ಯ ಸರ್ಕಾರದಿಂದ ಮೈಸೂರು ಉಚ್ಚ ನ್ಯಾಯಾಲಯದ ಸಲಹೆಯೊಡನೆ ನೇಮಕ ಗೊಂಡವರಾಗಿದ್ದು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಖ್ಯಾಧಿಕಾರಿ ಆಗಿದ್ದರು. ಸಿವಿಲ್ ಮೊಕದ್ದಮೆಗಳಲ್ಲಿ ಮುನ್ಸೀಫರು ನೀಡಿದ ತೀರ್ಪಿನ ಮೇಲೆ, ಹಾಗೂ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟ ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರ ತೀರ್ಪಿನ ಮೇಲೆ ಮೇಲ್ಮನವಿಯನ್ನು ತೀರ್ಮಾನಿಸುವ ಅಧಿಕಾರವನ್ನು ಹೊಂದಿದ್ದರು. ಈ ನ್ಯಾಯಾಡಳಿತವಲ್ಲದೆ ಜಿಲ್ಲೆಯಲ್ಲಿನ ಇತರ ನ್ಯಾಯಾಲಯಗಳ ಆಡಳಿತಾತ್ಮಕ ಕಾರ್ಯಗಳಲ್ಲೂ ಇವರು ಪ್ರಮುಖರಾಗಿದ್ದರು.

೧೯೬೫ ಏಪ್ರಿಲ್‌ಗೆ ಮೊದಲು ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಅಧಿಕ ಜಿಲ್ಲೆ ಮತ್ತು ಸತ್ರ ನ್ಯಾಯಾಧೀಶರು ಇದ್ದರು. ಇವರು ಗುಲಬರ್ಗಾ ಜಿಲ್ಲಾ ಮೊಕದ್ದಮೆಗಳನ್ನು ಗುಲಬರ್ಗಾದಲ್ಲೂ ರಾಯಚೂರು ಜಿಲ್ಲಾ ಮೊಕದ್ದಮೆಗಳನ್ನು ರಾಯಚೂರಿನಲ್ಲೂ ತೀರ್ಮಾನಿಸುತ್ತಿದ್ದರು. ನಂತರ ಈ ಹುದ್ದೆಯನ್ನು ರದ್ದು ಮಾಡಲಾಯಿತು. ೧೯೬೪ರ ಮೈಸೂರು ಸಿವಿಲ್ ಕೋರ್ಟ್ ಅಧಿನಿಯಮದಂತೆ, ಜಿಲ್ಲೆ ನ್ಯಾಯಾಧೀಶರ ಅಧಿಕಾರಗಳನ್ನು ಸಿವಿಲ್ ಜಡ್ಜ್‌ರವರಿಗೆ ವರ್ಗಾವಣೆ ಮಾಡಲಾಯಿತು. ಜಿಲ್ಲೆ ನ್ಯಾಯಾಧೀಶರ ನ್ಯಾಯಾಲಯವು ಮೇಲ್ಮನವಿ ನ್ಯಾಯಾಲಯವಾಗಿ ಸಿವಿಲ್ ಮೇಲ್ಮನವಿಗಳನ್ನು (೧೦೦೦೦ ರೂ ನಿಂದ ೨೦೦೦೦ ರೂ. ವರೆಗಿನ ಮೌಲ್ಯದ) ತೀರ್ಮಾನಿಸುವ ಅಧಿಕಾರವನ್ನು ಹೊಂದಿದ್ದಿತು. ೧೯೬೫ರ ಹೊತ್ತಿಗೆ ಗುಲಬರ್ಗಾ ಜಿಲ್ಲೆಯಲ್ಲಿದ್ದ ನ್ಯಾಯಾಲಯಗಳೆಂದರೆ, ಜಿಲ್ಲೆ ಜಡ್ಜ್‌ರ ನ್ಯಾಯಾಲಯ, ಸಿವಿಲ್ ಜಡ್ಜರ ನ್ಯಾಯಾಲಯ, ಗುಲಬರ್ಗಾ, ಸುರಪುರ, ಚಿತ್ತಾಪುರ, ಆಳಂದ, ಯಾದಗಿರಿ, ಸೇಡಂ ಮತ್ತು ಚಿಂಚೋಳಿಯಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟರ ನ್ಯಾಯಾಲಯಗಳು ಮತ್ತು ಇವಲ್ಲದೆ ಸುರಪುರದಲ್ಲೂ ಅಧಿಕ ಮುನ್ಸೀಫ್ ಮ್ಯಾಜಿಸ್ಟ್ರೇಟ, ಗುಲಬರ್ಗಾದಲ್ಲಿ ಪ್ರಥಮ, ಅಧಿಕ ಮತ್ತು ದ್ವಿತೀಯ ಮುನ್ಸೀಫ್ ಮ್ಯಾಜಿಸ್ಟ್ರೇಟರು ಬಾಲಾಪರಾಧಿಗಳ ನ್ಯಾಯ ತೀರ್ಮಾನವನ್ನು ಮಾಡುತ್ತಿದ್ದರು. ನಂತರ ನ್ಯಾಯಾಲಯಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ ಬಂದು ೧೯೬೭ರಲ್ಲಿ ಜಿಲ್ಲೆಯಲ್ಲಿದ್ದ ನ್ಯಾಯಾಲಯಗಳು ಈ ರೀತಿ ಇವೆ.

ಗುಲಬರ್ಗಾ ಜಿಲ್ಲೆಯಲ್ಲಿರುವ ಒಟ್ಟು ನ್ಯಾಯಾಲಯಗಳ ಸಂಖ್ಯೆ, ಹೆಸರು ಹಾಗೂ ನ್ಯಾಯಾಧೀಶರುಗಳ ಪದನಾಮ.

**ನ್ಯಾಯಾಲಯಗಳ ಹೆಸರು**

೧. ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲಬರ್ಗಾ

೨. ೧ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲಬರ್ಗಾ

೩. ೨ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲಬರ್ಗಾ

೪. ವ್ಯವಹಾರ ನ್ಯಾಯಾಧೀಶ ಮತ್ತು ಪ್ರಮುಖ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗುಲಬರ್ಗಾ

೫. ಹೆಚ್ಚುವರಿ ವ್ಯವಹಾರ ನ್ಯಾಯಾಧೀಶ ಮತ್ತು ಪ್ರಮುಖ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗುಲಬರ್ಗಾ

೬. ವ್ಯವಹಾರ ನ್ಯಾಯಾಧೀಶ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಯಾದಗಿರಿ

೭. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ.ಗಳವರ ನ್ಯಾಯಾಲಯ, ಗುಲಬರ್ಗಾ

೮. ೧ನೇ ಹೆಚ್ಚುವರಿ ಮುನ್ಸಿಪ್ ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ ಗುಲಬರ್ಗಾ

೯. ೨ನೇ ಹೆಚ್ಚುವರಿ ಮುನ್ಸಿಪ್ ಮತ್ತು ಪ್ರ. ದ. ನ್ಯಾ. ದಂ. ಗಳವರ ನ್ಯಾಯಾಲಯ ಗುಲಬರ್ಗಾ

೧೦. ೩ನೇ ಹೆಚ್ಚುವರಿ ಮುನ್ಸಿಫ್ ಮತ್ತು ಪ್ರ. ದ ನ್ಯಾ ದಂ. ಗಳವರ ನ್ಯಾಯಾಲಯ ಗುಲಬರ್ಗಾ

೧೧. ಮುನ್ಸಿಫ್ ಮತ್ತು ಪ್ರ. ದ. ನ್ಯಾ.ದಂ. ಗಳವರ ನ್ಯಾಯಾಲಯ, ಸುರಪುರ

೧೨. ಮುನ್ಸಿಫ್ ಮತ್ತು ಪ್ರ. ದ. ನ್ಯಾ ದಂ. ಗಳವರ ನ್ಯಾಯಾಲಯ, ಶಹಾಪೂರ

೧೩. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ.ಗಳವರ ನ್ಯಾಯಾಲಯ, ಜೇವರ್ಗಿ

೧೪. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ.ಗಳವರ ನ್ಯಾಯಾಲಯ, ಆಳಂದ

೧೫. ಮುನ್ಸಿಫ್ ಮತ್ತು ಪ್ರ. ದ. ನ್ಯಾ ದಂ. ಗಳವರ ನ್ಯಾಯಾಲಯ, ಅಫಜಲ್‌ಪುರ

೧೬. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ. ಗಳವರ ನ್ಯಾಯಾಲಯ, ಸೇಡಂ

೧೭. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ. ಗಳವರ ನ್ಯಾಯಾಲಯ, ಯಾದಗಿರಿ

೧೮. ಮುನ್ಸಿಫ್ ಮತ್ತ ಪ್ರ. ದ. ನ್ಯಾ. ದಂ. ಗಳವರ ನ್ಯಾಯಾಲಯ, ಚಿಂಚೋಳಿ

೧೯. ಮುನ್ಸಿಫ್ ಮತ್ತು ಪ್ರ. ದ. ನ್ಯಾ. ದಂ.ಗಳವರ ನ್ಯಾಯಾಲಯ ಚಿತ್ತಾಪುರ.

## ಜಿಲ್ಲೆ ಮತ್ತು ಸತ್ರ ನ್ಯಾಯಾಲಯ ಗುಲಬರ್ಗಾ

ಇದರ ೧೯೮೫-೮೬ ರಿಂದ ೧೯೯೪-೯೫ರವರೆಗಿನ ವರಮಾನ ಹಾಗೂ ಖರ್ಚಿನ ವಿವರ.

| ವರ್ಷ | ವರಮಾನ | ಖರ್ಚು |
|---|---|---|
| | ರೂ. | ರೂ. |
| ೧೯೮೫-೮೬ | ೧೭,೩೧೯ | ೧೦,೧೦,೫೦೪ |
| ೧೯೮೬-೮೭ | ೪೬,೩೦೦ | ೧೨,೬೧,೬೮೫ |
| ೧೯೮೭-೮೮ | ೫೬,೪೨೮ | ೧೬,೫೫,೫೪೭ |
| ೧೯೮೮-೮೯ | ೭೧,೫೧೧ | ೧೬,೧೫,೫೪೭ |
| ೧೯೮೯-೯೦ | ೮೯,೭೫೫ | ೧೮,೪೦,೨೪೪ |
| ೧೯೯೦-೯೧ | ೯೪,೭೩೯ | ೧೯,೯೫,೭೪೬ |
| ೧೯೯೧-೯೨ | ೧.೦೫,೪೩೬ | ೨೧,೮೫,೬೫೦ |
| ೧೯೯೨-೯೩ | ೧,೧೪,೩೩೫ | ೨೫,೦೮,೮೧೪ |
| ೧೯೯೩-೯೪ | ೧,೩೦,೫೯೪ | ೩೧,೯೫,೧೨೦ |
| ೧೯೯೪-೯೫ | ೧೫,೬೯,೪೭೬ | ೧,೫೧,೮೧,೩೦೭ |

(ಆಧಾರ : ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲಬರ್ಗಾ)

**ಕೋಷ್ಟಕ ೧೦.೨**

**ಗುಲಬರ್ಗಾ ಜಿಲ್ಲೆಯಲ್ಲಿನ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ದಾವೆಗಳ ವಿವರ :- ಮುನ್ಸೀಫ್ ನ್ಯಾಯಾಲಯಗಳು (ಸಿವಿಲ್)**

| | ಮೂಲದಾವೆ | | ಲಘು ವ್ಯವಹಾರಗಳ ದಾವೆ | | ಜಾರಿ ದಾವೆ | | ಇತರೆ | |
|---|---|---|---|---|---|---|---|---|
| ೧೯೭೦-೭೧ | ೧೦೦೬ | ೮೯ | ೨೮ | ೯ | ೩೨೦ | ೩೦೯ | ೩೯೦ | ೪೧೫ |
| ೧೯೮೦-೮೧ | ೧೩೯೩ | ೧೧೮೫ | ೫೩ | ೨೮ | ೧೬೮ | ೧೬೩ | ೩೦೮ | ೩೦೫ |
| ೧೯೮೫-೮೬ | ೧೭೭೪ | ೧೪೯೩ | ೧೬ | ೩೪ | ೩೮೯ | ೪೦೯ | ೨೫೯ | ೨೫೬ |
| ೧೯೮೯-೯೦ | ೧೮೩೪ | ೧೬೭೯ | ೫ | ೪ | ೩೨೪ | ೨೪೯ | ೨೯೭ | ೨೯೧ |
| ೧೯೯೩-೯೪ | ೨೯೩೩ | ೨೨೮೬ | ೨೩ | ೨೦ | ೬೭೬ | ೧೭೩ | ೪೬೧ | ೨೪೩ |
| ೧೯೯೪-೯೫ | ೨೯೭೩ | ೨೯೪೪ | ೧೦೨ | ೧೦೧ | ೪೯೦ | ೪೦೨ | ೩೭೯ | ೫೨೭ |

**ಕೋಷ್ಟಕ ೧೦.೩**

ಗುಲಬರ್ಗಾ ಜಿಲ್ಲೆಯಲ್ಲಿನ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ದಾವೆಗಳ ವಿವರ **ಸಿಟಿ ಸಿವಿಲ್ ನ್ಯಾಯಾಲಯ**

| | ಮೂಲದಾವೆ | | ಲಘುವ್ಯವಹಾರಗಳ ದಾವೆ | | ಜಾರಿ ದಾವೆ | | ಇತರೆ | | ನಿಯಮಿತ ಅಪೀಲುಗಳು | | ಇತರೆ ಅಪೀಲುಗಳು | |
|---|---|---|---|---|---|---|---|---|---|---|---|---|
| | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ |
| ೧೯೭೦-೭೧ | ೯೦ | ೭೬ | ೧೧ | ೧೦ | ೫೦ | ೪೪ | ೮೭ | ೯೭ | ೧೮೯ | ೩೮೮ | ೮೭ | ೯೧ |
| ೧೯೮೦-೮೧ | ೨೧೧ | ೧೨೧ | ೬೯ | ೬೬ | ೮೧ | ೫೫ | ೫೪೪ | ೨೦೩ | ೧೯೩ | ೧೭೪ | ೯೬ | ೬೧ |
| ೧೯೮೫-೮೬ | ೪೦೨ | ೨೫೧ | ೬೬ | ೬೩ | ೧,೩೦೨ | ೬೧೨ | ೩೬೪ | ೩೫೨ | ೧೯೮ | ೧೩೦ | ೧೨೦ | ೧೦೩ |
| ೧೯೮೯-೯೦ | ೫೫೯ | ೪೩೮ | ೩೨ | ೬೩ | ೪೮೭ | ೪೫೪ | ೯೨೭ | ೮೭೯ | ೨೦೨ | ೧೦೮ | ೧೯೨ | ೧೮೮ |
| ೧೯೯೩-೯೪ | ೨೩೮ | ೧೩೬ | ೬೨ | ೭೬ | ೫೨೭ | ೩೭೦ | ೨,೩೦೦ | ೯೪೧ | ೧೬೫ | ೧೬೨ | ೧೧೬ | ೧೧೦ |
| ೧೯೯೪-೯೫ | ೩೭೨ | ೨೮೯ | ೧,೧೪೫ | ೩೩೭ | ೩೪೧ | ೪೦೪ | ೨,೯೮೬ | ೨,೪೭೬ | ೨೮೭ | ೨೬೦ | ೧೨೩ | ೧೨೩ |

ದಾ - ದಾಖಲಾದವು, ತೀ - ತೀರ್ಮಾನವಾದವು

## ಕೋಷ್ಟಕ ೧೦.೪

ಗುಲಬರ್ಗಾ ಜಿಲ್ಲೆಯಲ್ಲಿನ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ದಾವೆಗಳ ವಿವರ **ಜಿಲ್ಲಾ ನ್ಯಾಯಾಲಯ (ಸಿವಿಎಲ್)**

| | ಮೂಲದಾವೆ | | ಜಾರಿ ದಾವೆ | | ಇತರೆ | | ದಿವಾಳಿ ಅರ್ಜಿ | | ನಿಯಮಿತ ಅಪೀಲುಗಳು | | ಇತರೆ ಅಪೀಲುಗಳು | |
|---|---|---|---|---|---|---|---|---|---|---|---|---|
| | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ | ದಾ | ತೀ |
| ೧೯೭೦-೭೧ | -- | -- | -- | -- | ೫೪ | ೪೭ | -- | -- | ೨೭ | ೨೩ | ೬೭ | ೨೨೬ |
| ೧೯೮೦-೮೧ | ೪೪ | ೪೪ | ೧ | -- | ೧೦೫ | ೭೯ | -- | -- | ೯೨ | ೮೭ | ೭೯ | ೬೯ |
| ೧೯೮೫-೮೬ | ೬ | -- | ೩೦೯ | ೩೦೮ | ೬೯ | ೬೯ | -- | ೧ | ೨೨ | ೨೩ | ೯೪ | ೭೩ |
| ೧೯೮೯-೯೦ | ೫ | ೨ | ೬೨ | ೯೦ | ೪೬೨ | ೨೨೧ | -- | -- | ೪೦ | ೧೨ | ೧೧೦ | ೮೬ |
| ೧೯೯೩-೯೪ | - | ೧ | ೮೧ | ೫೦ | ೫೫೨ | ೩೭೫ | ೨೦ | ೧೬ | ೧೦೯ | ೧೬ | ೭೨೫ | ೧೪೩ |
| ೧೯೯೪-೯೫ | -- | -- | ೯೧ | ೧೧ | ೭೩೯ | ೬೧೨ | -- | -- | ೩೨ | ೧೧ | ೫೯ | ೩೧ |

ದಾ - ದಾಖಲಾದವು, ತೀ - ತೀರ್ಮಾನವಾದವು

## ಕೋಷ್ಟಕ ೧೦.೫

### ಗುಲಬರ್ಗಾ ಜಿಲ್ಲೆಯಲ್ಲಿನ ನ್ಯಾಯಾಲಯಗಳಲ್ಲಿ ಇತ್ಯರ್ಥವಾದ ದಾವೆಗಳ ವಿವರ **ಮ್ಯಾಜಿಸ್ಟ್ರೇಟರ ನ್ಯಾಯಾಲಯ**

| ಕ್ರ.ಸಂ. | ದಾವೆಗಳು | ೧೯೭೦-೭೧ | ೧೯೮೦-೮೧ | ೧೯೮೫-೮೬ | ೧೯೮೮-೮೯ | ೧೯೯೩-೯೪ | ೧೯೯೪-೯೫ |
|---|---|---|---|---|---|---|---|
| ೧. | ಮೂಲ ದಾವೆಗಳು | ೫,೮೧೩ | ೮,೬೫೭ | ೧೭,೫೧೭ | ೧೨,೨೫೩ | ೧೨,೯೬೬ | ೧೧,೦೨೧ |
| | ಮತ್ತು ಇತರೆ ದಾವೆಗಳು | ೬೪೫ | ೬೪೬ | ೪೫೭ | ೫೧೭ | ೬೩೬ | ೪೧೪ |
| ೨. | ಪ್ರೊಬೇಶನ್ ಆಫ್ ಅಫೆಂಡರ್ ಕಾಯಿದೆ-ಅನ್ವಯ್ಸ | ೨೮೭ | ೧೭೮ | ೧೨೮ | ೭೫ | ೨೬ | ೧೦ |
| ೩. | ಶಿಕ್ಷೆಗೊಳಪಟ್ಟ ಖೈದಿಗಳು | ೩೧೨ | ೬,೦೭೮ | ೧೦,೭೭೫ | ೧೦,೬೪೯ | ೧೦,೫೭೦ | ೯,೩೪೮ |
| ೪. | ಅಪರಾಧಗಳು ಇತರೆ ದಾವೆ (ಕ್ರಿಮಿನಲ್ ಮಿಸಲೀನಿಯಸ್ ದಾವೆಗಳು) | ೬೪೫ | ೮೯ | ೪೫೭ | ೫೨೭ | ೫೨೮ | ೮೧೪ |
| ೫. | ಒಟ್ಟು ಕ್ರಿಮಿನಲ್ ದಾವೆಗಳು | ೬೬೭೪ | ೧೨೯೨೨-ದಾ<br>೮೬೫೧ ತೀ | ೧೨೮೪೮ ದಾ<br>೮೭೮೦ ತೀ | ೨೩೧೦೮ ದಾ<br>೧೧೯೨೬ ತೀ | ೨೪೪೭೮ ದಾ<br>೧೨೯೨೨ ತೀ | ೨೩೧೬೯ ದಾ<br>೧೦೯೩೪ ತೀ |

ದಾ - ದಾಖಲಾದ ದಾವೆಗಳು

ತೀ - ತೀರ್ಮಾನ ವಾದವುಗಳು

## ಕೋಷ್ಟಕ ೧೦.೬

### ಗುಲಬರ್ಗಾ ಜಿಲ್ಲೆಯಲ್ಲಿನ ತೀರ್ಮಾನವಾದ ಅಪರಾಧ ದಾವೆ (ಕ್ರಿಮಿನಲ್ ಕೇಸುಗಳು)ಗಳ ವಿವರ

### (ಜಿಲ್ಲೆ ಸತ್ರ ನ್ಯಾಯಾಲಯದಲ್ಲಿ)

| ಕ್ರ.ಸಂ. | ದಾವೆಗಳು | ೧೯೭೦-೭೧ | ೧೯೮೦-೮೧ | ೧೯೮೫-೮೬ | ೧೯೮೯-೮೯ | ೧೯೯೩-೯೪ | ೧೯೯೪-೯೫ |
|---|---|---|---|---|---|---|---|
| ೧. | ಮೂಲ ದಾವೆಗಳು | ೨೭ | ೫೬ | ೯೨ | ೮೭ | ೬೫ | ೫೭ |
| | ಮತ್ತು ಇತರೆ ದಾವೆಗಳು | ೫೨ | ೮೯ | ೧೨೮ | ೨೪೨ | ೫೨೮ | ೫೩೮ |
| ೨. | ಶಿಕ್ಷೆಗೊಳಪಟ್ಟ ಖೈದಿಗಳು | ೧೭ | ೩೪ | ೭೧ | ೯ | ೧೯ | ೯ |
| ೩. | ಅಪರಾಧಗಳ ಇತರೆ ದಾವೆಗಳು | | | | | | |
| | (ಕ್ರಿಮಿನಲ್ ಮಿಸಲೇನಿಯಸ್) | ೫೨ | ೬೪೬ | ೧೨೮ | ೨೪೨ | ೬೩೬ | ೫೩೮ |
| ೪. | ಕ್ರಿಮಿನಲ್ ಮೇಲ್ಮನವಿ ದಾವೆಗಳು | ೧೩೧ | ೮೬ | ೯೨ | ೪೬ | ೬೧ | ೨೩ |
| | (ಮೇಲ್ಮನವಿನಗಳೊಪಟ್ಟ ಜನರ ಸಂಖ್ಯೆ) | ೧೩೧ | ೮೬ | ೧೨೨ | ೭೬ | ೯೫ | ೫೭ |
| ೫. | ಒಟ್ಟು ಕ್ರಿಮಿನಲ್ | ೧೦೮ ದಾ | ೭೪ ದಾ | ಲವಿ | ಲವಿ | ೪೬೬ ದಾ | ೫೪೮ ದಾ |
| | ದಾವೆಗಳು | ೯೬ ತೀ | ೫೬ ತೀ | | | ೬೫ ತೀ | ೫೭ ತೀ |

ದಾ - ದಾಖಲಾದವು

ತೀ - ತೀರ್ಮಾನವಾದವು

## ಪೋಲೀಸ್ ಆಡಳಿತ

೧೮೫೩ಕ್ಕೂ ಹಿಂದೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸುಸಂಘಟಿತವಾದ ಒಂದು ಪೋಲೀಸ್ ದಳ ಇರಲಿಲ್ಲ. ೧೮೬೬ರಲ್ಲಿ ಒಂದು ನಿಯತವಾದ ಪೋಲೀಸ್ ದಳವನ್ನು ರಚಿಸಲಾಯಿತು. ಹಾಗೂ ಇದನ್ನು ರೆವಿನ್ಯೂ ಅಧಿಕಾರಿಗಳ ಆಧೀನದಲ್ಲಿ ಇಡಲಾಯಿತು. ೧೮೬೯ರಲ್ಲಿ ಒಬ್ಬ ವಿಶೇಷ **ಸದರ-ಉಲ್-ಮೊಹಂ** ಅಥವಾ ಪೋಲೀಸ್ ಸಚಿವರನ್ನು ನೇಮಕ ಮಾಡಲಾಯಿತು. ಇವರಿಗೆ ಹೈದರಾಬಾದ್ ರಾಜ್ಯದ ಪೋಲೀಸರ ಮೇಲೆ ಪೂರ್ಣ ಅಧಿಕಾರ ಇದ್ದಿತು. ಹೈದರಾಬಾದ್ ಕರ್ನಾಟಕ ಪ್ರದೇಶದ ಪೋಲೀಸ್ ಆಡಳಿತ ಪ್ರಾರಂಭದ ಕಾಲದ ಇತಿಹಾಸವನ್ನು ಸ್ಥೂಲವಾಗಿ ಎರಡು ವಿಶಿಷ್ಟ ಅವಧಿಗಳನ್ನಾಗಿ ವಿಂಗಡಿಸಬಹುದು. ೧೯೪೮ಕ್ಕೂ ಹಿಂದಿನ ಅವಧಿ ಮತ್ತು ತದನಂತರದ ಅವಧಿ. ನಿಜಾಮರ ಆಳ್ವಿಕೆಯ ಕಾಲದಲ್ಲಿ ಕಲ್ಬುರ್ಗಿ, ಬೀದರ್, ರಾಯಚೂರು ಮತ್ತು ಉಸ್ಮಾನಾಬಾದ್ ಈ ನಾಲ್ಕು ಜಿಲ್ಲೆಗಳನ್ನೊಳಗೊಂಡ ಕಲ್ಬುರ್ಗಿಯ **ಸುಭಾ** (ವಿಭಾಗ)ದ ಕೇಂದ್ರಸ್ಥಾನವಾಗಿತ್ತು. ಇಲ್ಲಿಂದ ಎರಡು ಪ್ರತ್ಯೇಕ ಪೋಲೀಸ್ ದಳಗಳು ಕಾರ್ಯ ನಿರ್ವಹಿಸುತ್ತಿದ್ದವು. ಅದರಲ್ಲಿ ಒಂದು ದಿವಾನೀ ಪೋಲೀಸ್ ದಳವು ನಿಜಾಮರ ಸರ್ಕಾರದ ಪೋಲೀಸ್ ದಳವಾಗಿತ್ತು. ಜಹಗೀರ್ ಪೋಲೀಸ್ ದಳವು ವೈಯುಕ್ತಿಕ ಜಾಗೀರುದಾರರ ಪೋಲೀಸ್ ದಳವಾಗಿದ್ದು ಅವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಇಟ್ಟುಕೊಳ್ಳಲು ಅನುಮತಿಸಲಾಗಿದ್ದು, ಪ್ರತ್ಯೇಕ ಪೋಲೀಸ್ ದಳವಾಗಿದ್ದಿತು. ಜಹಗೀರ್ ಪೋಲೀಸ್ ದಳವನ್ನು ವ್ಯವಸ್ಥಿತ ರೀತಿಯಲ್ಲಿ ಸಂಘಟಿಸಿರದಿದ್ದ ಕಾರಣ ಅದು ಹೆಚ್ಚು ಕಡಿಮೆ ಅವ್ಯವಸ್ಥೆಯಲ್ಲಿತ್ತು. ೧೯೪೮ರಲ್ಲಿ ಹೈದರಾಬಾದ್ ರಾಜ್ಯವನ್ನು ಭಾರತದ ಒಕ್ಕೂಟದೊಂದಿಗೆ ವಿಲೀನಗೊಳಿಸಿದ ತರುವಾಯ ಜಹಗೀರ್‌ಗಳನ್ನು ರದ್ದುಗೊಳಿಸಲಾಯಿತು. ಮತ್ತು ಎಲ್ಲಾ ಪೋಲೀಸ್ ಆಡಳಿತವನ್ನು ದಿವಾನೀ ಪೋಲೀಸ್ ವ್ಯವಸ್ಥೆಗೆ ವಹಿಸಿಕೊಡಲಾಯಿತು. ಪೋಲಿಸರಲ್ಲಿ **ದಿವಾನಿ ದಳ, ಜಗೀರ್** ಮತ್ತು **ಪೈಗಾಗಳಿಗೆ** ನೇಮಿಸಲ್ಪಟ್ಟವರು ಇದ್ದರು. ಪೋಲೀಸ್ ದಳವೂ ಒಂದು ಏಕೈಕ ವ್ಯವಸ್ಥೆಯಾಗಿರಲಿಲ್ಲ. ದಿವಾನಿಗಳಿಗೆ ವ್ಯವಸ್ಥಿತವಾದ ತರಬೇತಿ ಇದ್ದಿತು. ಜಾಗೀರುಗಳಲ್ಲಿ ನ್ಯಾಯಾಡಳಿತ ವ್ಯವಸ್ಥೆ ಜಾಗೀರದಾರರ ನಿಯಂತ್ರಣದಲ್ಲಿತ್ತು. ಇವರ ಆಳ್ವಿಕೆಯಲ್ಲಿ ಪೋಲೀಸ್ ಬಲದ ಆಡಳಿತವು ಯಾವುದೇ ನಿರ್ದಿಷ್ಟ ಕ್ರಮವಿಲ್ಲದೆ, ಕಠಿಣ ನಿಯಮಗಳಿಲ್ಲದೆ ಇದ್ದಿತು. ಆಗಿನ ಪರಿಸ್ಥಿತಿಯಲ್ಲಿ ಗುಲಬರ್ಗಾವು ಕೋಮು ಗಲಭೆಗಳಿಗೆ ಹೆಚ್ಚು ಕಡಿಮೆ ಕೇಂದ್ರ ಸ್ಥಳದಂತಿದ್ದಿತು. ಆದ್ದರಿಂದ ಕೆಲವು ಗಂಭೀರ ಕೋಮು ಗಲಭೆಗಳು ಆಗಾಗ್ಗೆ ನಡೆಯುತ್ತಿದ್ದವು. ೧೯೩೭ ರಲ್ಲಿ ಅರ್ಯ ಸಮಾಜದ ಚಳುವಳಿಯ ಸಂದರ್ಭದಲ್ಲಿಯೂ ಶಾಂತಿ ಪಾಲನೆ ಸಮರ್ಪಕವಾಗಿರಲಿಲ್ಲ. ಮಹಾರಾಷ್ಟ್ರದ ಸೊಲ್ಲಾಪುರ ಮೊದಲಾದ ಸ್ಥಳಗಳಿಂದ ಬಂದ ಆರ್ಯ ಸಮಾಜದ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಗುಲಬರ್ಗಾದಲ್ಲಿ ಸೇರಿ, ಜವಾಬ್ದಾರಿ ಸರ್ಕಾರದ ಅಗತ್ಯಕ್ಕಾಗಿ ಚಳುವಳಿ ನಡೆಸಿದರು. ಇದರಿಂದ ಘರ್ಷಣೆಗಳು ಹೆಚ್ಚಾದುವು. ಪ್ರತಿಷ್ಠಿತ ರಾಜಕಾರಣಿಗಳನ್ನು ಗುಲಬರ್ಗಾ ಕಾರಾಗೃಹದಲ್ಲಿಡಲಾಯಿತು. ನಂತರ 'ರಝಾಕರ' ಚಳುವಳಿ ಪ್ರಾರಂಭವಾಯಿತು. ಪೋಲೀಸ್ ಆಕ್ಷನ್ ನ ನಂತರ ಪರಿಸ್ಥಿತಿ ಶಾಂತವಾಯಿತು. ಕೇಂದ್ರ ಸರ್ಕಾರವು ಹೈದರಾಬಾದ್ ರಾಜ್ಯದ ಆಡಳಿತವನ್ನು ನಡೆಸುವ ಜವಾಬ್ದಾರಿಯನ್ನು ತೆಗೆದುಕೊಂಡಿತು. ನಂತರ ಸುಮಾರು ಶೇಕಡ ೪೦ ರಿಂದ ೫೦ ಮುಸಲ್ಮಾನ ಅಧಿಕಾರಿಗಳು ತಮ್ಮ ಅಧಿಕಾರವನ್ನು ಬಿಟ್ಟು ಪಾಕಿಸ್ಥಾನಕ್ಕೆ ಹೋದರು. ಈ ಸಮಯದಲ್ಲಿ ಪೋಲೀಸರಿಗೆ ಶಾಂತಿಪಾಲನೆಯ ಕಾರ್ಯ ಕಷ್ಟವಾಯಿತು. ಹೊಸದಾಗಿ ಜನಗಳನ್ನು ಪೋಲೀಸ್ ದಳಕ್ಕೆ ಸೇರಿಸಿ ಕೊಳ್ಳವ ಅಗತ್ಯವುಂಟಾಯಿತು. ೧೯೫೪ನೇ ಆಗಸ್ಟ್ ೨೭ ರಂದು, ಗುಲಬರ್ಗಾದ ಗಣೇಶ ಮಂದಿರದ ಬಳಿ ಪಾಕಿಸ್ತಾನದ ಧ್ವಜವನ್ನು ಹಾರಿಸಿದರಿಂದ ವ್ಯಾಪಕ ಕೋಮು ಗಲಭೆಯುಂಟಾಯಿತು. ಕೊಲೆ, ದರೋಡೆ, ಸುಲಿಗೆಗಳಾದವು. ಸುಮಾರು ೭-೮ ಜನ ಕೊಲ್ಲಲ್ಪಟ್ಟರು. ಮತ್ತು ೩೫ ಅಂಗಡಿಗಳಲ್ಲಿ ಸುಲಿಗೆಗಳಾದವು. ಹೈದರಾಬಾದ್‌ನ ಕಾಯ್ದಿಟ್ಟ ಪೋಲೀಸ್ ಪಡೆಯನ್ನು ಕರೆಸಿ, ಶಾಂತಿಯನ್ನು ಕಾಪಾಡಬೇಕಾಯಿತು. ೧೯೫೬ರಲ್ಲಿ ರಾಜ್ಯದ ಪುನರ್ವಿಂಗಡಣೆಯಾದ ನಂತರ ಹೈದರಾಬಾದ್ ರಾಜ್ಯವನ್ನು ವಿಭಜಿಸಿ ಗುಲಬರ್ಗಾ, ರಾಯಚೂರು ಮತ್ತು ಬೀದರ್‌ನ್ನು ಕರ್ನಾಟಕ ರಾಜ್ಯದೊಡನೆ ವಿಲೀನಗೊಳಿಸಲಾಯಿತು. ೧೯೫೯ರಲ್ಲಿ ಜಿಲ್ಲೆ ಪೋಲೀಸ್ ಆಡಳಿತವನ್ನು ಗುಲಬರ್ಗಾ, ಶಹಾಬಾದ್ ಮತ್ತು ಯಾದಗೀರ್ ಎಂಬ ಮೂರು ಉಪವಿಭಾಗಗಳಾಗಿ ವಿಂಗಡಿಸಲಾಯಿತು. ಪೋಲೀಸ್ ವೃತ್ತಗಳು ೭ಕ್ಕೆ ಹೆಚ್ಚಾದವು.

೧೯೬೫ರ ಸಮಯದಲ್ಲಿ ಗುಲಬರ್ಗಾ ಜಿಲ್ಲೆಯು ಬೆಳಗಾವಿ ವಲಯದ ಆಡಳಿತ ವ್ಯಾಪ್ತಿಯಲ್ಲಿದ್ದಿತು. ಬೆಳಗಾವಿಯಲ್ಲಿದ್ದ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್, ಇವರು ಗುಲಬರ್ಗಾ ಜಿಲ್ಲೆಯನ್ನೂ ಸೇರಿದಂತೆ, ೪ ಜಿಲ್ಲೆಗಳಿಗೆ

ಸೇರಿದ ಉತ್ತರ ವಲಯದ ಮುಖ್ಯ ಪೋಲೀಸ್ ಅಧಿಕಾರಿಯಾಗಿದ್ದರು. ಗುಲಬರ್ಗಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಜಿಲ್ಲೆಯಲ್ಲಿ ನ್ಯಾಯ ಮತ್ತು ಶಾಂತಿ ಪಾಲನೆಯನ್ನು ನೋಡಿಕೊಳ್ಳುವ ಅಧಿಕಾರಿಯಾಗಿದ್ದರು. ಜಿಲ್ಲಾ ಪೋಲೀಸ್ ಅಧೀಕ್ಷಕರು ಜಿಲ್ಲೆಯಲ್ಲಿ ಉನ್ನತಾಧಿಕಾರಿಯಾಗಿದ್ದರು. ಇವರ ಅಧೀನದಲ್ಲಿ, ಉಪ ಪೋಲೀಸ್ ಅಧೀಕ್ಷಕರು ಉಪ ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದರು. ಇತರ ಅಧಿಕಾರಿಗಳೆಂದರೆ ವೃತ್ತ ನಿರೀಕ್ಷಕರು, ಸಬ್‌ಇನ್ಸ್‌ಪೆಕ್ಟರ್, ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಮುಖ್ಯ ಕಾನ್‌ಸ್ಟೇಬಲ್ ಮೊದಲಾದವರು. ಪೋಲೀಸ್ ಆಡಳಿತಕ್ಕೆ ಜಿಲ್ಲೆಯನ್ನು ಗುಲಬರ್ಗಾ, ಶಹಾಬಾದ್ ಮತ್ತು ಯಾದಗಿರಿ ಎಂಬ ಮೂರು ವಿಭಾಗಗಳನ್ನಾಗಿ ವಿಭಾಗಿಸಲಾಗಿತ್ತು. ಹಾಗೂ ಏಳು ಪೋಲೀಸ್ ವೃತ್ತಗಳಿದ್ದವು. ಗುಲಬರ್ಗಾ, ಗುಲಬರ್ಗಾನಗರ, ಶಹಾಬಾದ್, ಚಿಂಚೋಳಿ ಯಾದಗಿರಿ, ಸುರಪುರ, ಜೇವರ್ಗಿ.

ಜಿಲ್ಲೆಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಪೋಲೀಸ್ ಠಾಣೆಗಳಿದ್ದವು. (೧೯೬೬)

| | | |
|---|---|---|
| ಗುಲಬರ್ಗಾ ನಗರ | - | ಸ್ಟೇಷನ್ ಬಜಾರ, ಚೌಕಿ, ಜಗತ್, ಗ್ರಾಮೀಣ ಮತ್ತು ಮಹಾಗಾಂವ (೫) |
| ಶಹಬಾದ್ | - | ಶಹಬಾದ್, ಚಿತ್ತಾಪುರ, ಸೇಡಂ, ಮುಧೋಳ, (೪) |
| ಆಳಂದ | - | ಆಳಂದ, ನರೋನ, ಅಫಜಲ್‌ಪುರ, ನಿಂಬರ್ಗಿ, ರೇವೂರು (೫) |
| ಚಿಂಚೋಳಿ | - | ಚಿಂಚೋಳಿ, ಸೂಲೆಪೇಟೆ, ರಟ್ಕಲ, ಕಲ್ಲಿ (೪) |
| ಯಾದಗಿರಿ | - | ಯಾದಗಿರ್ ನಗರ, ಯಾದಗೀರ್ ಗ್ರಾಮೀಣ, ಗುರಮಟಕಲ್, ಸೈದಾಪುರ, ವಡಗೇರಾ - (೫) |
| ಸುರಪುರ | - | ಸುರಪುರ, ಕೊಡೆಕಲ್, ಕೆಂಬಾವಿ,ಶಹಾಪುರ (೪) |
| ಜೇವರ್ಗಿ | - | ಜೇವರ್ಗಿ, ಗೋಗಿ, ಘರಹತಾಬಾದ್, ಯಡ್ರಾವಿ, ನಿರೋಗಿ (೫) |

ಈ ಅವಧಿಯಲ್ಲಿ ಒಟ್ಟು ಏಳು ಸರ್ಕಲ್ ಇನ್‌ಸ್ಪೆಕ್ಟರ್‌ಗಳು (ಎರಡು ಕಾದಿಟ್ಟ ಇನ್‌ಸ್ಪೆಕ್ಟರ್, ವಿಶೇಷ ವಿಭಾಗದ ಇನ್ಸ್‌ಪೆಕ್ಟರ್) ಮತ್ತು ೩೬ ಸಬ್‌ಇನ್‌ಸ್ಪೆಕ್ಟರ್‌ಗಳು, ೧೫೭ ಹೆಡ್‌ಕಾನ್‌ಸ್ಟೇಬಲ್‌ಗಳು ಮತ್ತು ೧೦೬೦ ಕಾನ್‌ಸ್ಟೇಬಲ್‌ಗಳಿದ್ದರು, ಗುಲಬರ್ಗಾ ಜಿಲ್ಲೆಯಲ್ಲಿ ಪ್ರತ್ಯೇಕ ಶಸ್ತ್ರ ಸಜ್ಜಿತ ಪೋಲೀಸ್ ಪಡೆ ಇದ್ದಿತು. ಈ ಪಡೆಯು ರಾಜಕೀಯ ಪಕ್ಷಗಳು ಕಾರ್ಮಿಕರ ಯೂನಿಯನ್, ಮತೀಯ ಸಂಸ್ಥೆಗಳು ಮೊದಲಾದವುಗಳ ಬಗ್ಗೆ ಗುಪ್ತ ಮಾಹಿತಿಗಳನ್ನು ಪಡೆಯುತ್ತಿದ್ದವು. ಜಿಲ್ಲಾ ರೈಲ್ವೆ ಪೋಲೀಸ್ ವಿಭಾಗವು ಒಬ್ಬ ಸಬ್‌ಇನ್‌ಸ್ಪೆಕ್ಟರ್ (ವಾಡಿ ರೈಲ್ವೆ ನಿಲ್ದಾಣದಲ್ಲಿ) ಇದ್ದು ೮ ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ೩೦ ಕಾನ್‌ಸ್ಟೇಬಲ್ ಗಳಿದ್ದರು. ವಾಡಿ, ಶಹಾಬಾದ್ ಮತ್ತು ಗುಲಬರ್ಗಾ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಪೋಲೀಸ್ ಠಾಣೆಗಳಿದ್ದವು. ನಂತರ ಪೋಲೀಸ್ ಆಡಳಿತದಲ್ಲಿ ಬದಲಾವಣೆಗಳಾದವು. ೧೯೮೪ ರಿಂದ ೧೯೯೫ರರವರೆಗಿನ ಪೋಲೀಸ್ ಸಿಬ್ಬಂದಿಯ ವಿವರವನ್ನು ಮುಂದಿನ ಪುಟಗಳಲ್ಲಿ ಪಟ್ಟಿಯಲ್ಲಿ ಕೊಡಲಾಗಿದೆ.

## ನ್ಯಾಯ ಮತ್ತು ಶಾಂತಿಪಾಲನೆ

೧೯೫೪ರ ಗಲಭೆಯ ನಂತರ ಜಿಲ್ಲೆಯು ಕೋಮುಗಲಭೆಗಳು ಹೆಚ್ಚು ಇರಲಿಲ್ಲ. ಕಾರ್ಮಿಕರ ಗಲಭೆಗಳು ಎಸಿಸಿ ಮತ್ತು ಎಂ. ಎಸ್. ಕೆ. ಮಿಲ್ಸ್ ಈ ಎರಡು ಕೈಗಾರಿಕೆಗಳಲ್ಲಿ ಆಗಿದ್ದಿತು. ೧೯೬೧ರ ಸೆಪ್ಟೆಂಬರ್‌ನಲ್ಲಿ ಗುಲಬರ್ಗಾದ ಕೈಗಾರಿಕಾ ಪ್ರದೇಶದಲ್ಲಿ ಸಣ್ಣ ಗಲಭೆಗಳಾಗಿದ್ದವು. ಉಪವಾಸ ಸತ್ಯಾಗ್ರಹವನ್ನು ಕಾರ್ಮಿಕರು ಕೈಗೊಂಡಿದ್ದರು. ಡಿಸೆಂಬರ್ ೧೯೬೪ರಲ್ಲಿ ರಿಪಬ್ಲಿಕ್‌ನ ಪಕ್ಷದವರು,ಆಹಾರ ಸಾಮಗ್ರಿಗಳ ಬೆಲೆ ಹೆಚ್ಚಳದ ಕಾರಣ ಸತ್ಯಾಗ್ರಹ ಮಾಡಿದ್ದರು. ನಂತರದ ವರ್ಷಗಳಲ್ಲಿ ಪ್ರಮುಖವಾದುದೆಂದರೆ ರೈತರ ಗಲಭೆ ಹಾಗೂ ವಿದ್ಯಾರ್ಥಿಗಳ ಗಲಭೆಗಳು, ೧೯೮೪ರ ನಂತರದಲ್ಲಿ ಆದ ಕೆಲವು ಗಲಭೆಗಳ ಬಗ್ಗೆ ಸ್ಥೂಲವಾಗಿ ಇಲ್ಲಿ ಕೊಡಲಾಗಿದೆ.

೧೯೮೪ರಲ್ಲಿ ಜಿಲ್ಲೆಯಲ್ಲಿ ಹೆಚ್ಚು ಗಣನೀಯವಾದ ಗಲಭೆಗಳು ನಡೆಯಲಿಲ್ಲ. ಮೇ ೮೪ರಲ್ಲಿ ಚಿತ್ತಾಪುರ ತಾಲೂಕಿನ ಕಡದೂರು ಗ್ರಾಮದಲ್ಲಿ ಪ್ರಾಣಿ ಬಲಿಯ ಬಗ್ಗೆ ವಿರೋಧಿಸಿ ಗಲಭೆಗಳಾಗಿದ್ದಿತು. ಹಾಗೆಯೇ ಆಗಸ್ಟ್ ಮತ್ತು ಸೆಪ್ಟೆಂಬರ್ ೮೪ರಲ್ಲಿ ಆಂಧ್ರ ಪ್ರದೇಶದಲ್ಲಿ ಎನ್. ಟಿ. ರಾಮರಾವ್ ಸರ್ಕಾರವನ್ನು ವಜಾ ಮಾಡಿದ ಕಾರಣಕ್ಕಾಗಿ ಮತ್ತು ಗುಲಬರ್ಗಾ

ವಿಶ್ವವಿದ್ಯಾಲಯದ ಕುಲಪತಿಗಳ ಸೇವೆಯನ್ನು ಮುಂದುವರಿಸಬೇಕೆಂದು ಗಲಭೆಗಳಾಗಿದ್ದವು. ಮಾರ್ಚ್ ೮೪ರಲ್ಲಿ ಮುಕಾಂಪುರದಲ್ಲಿ ಹೋಳಿ ಹಬ್ಬದ ಸಮಯದಲ್ಲಿ, ಪೋಲೀಸರು ಲಾಠಿ ಛಾರ್ಜ್ ಮಾಡಿದ್ದರು. ಮತ್ತು ಟಿಯರ್ ಗ್ಯಾಸ್‌ನ್ನು ಪ್ರಯೋಗ ಮಾಡಿದ್ದರು. ಜಿಲ್ಲೆಯಲ್ಲಿ ೨೭ ಬಾರಿ ಉಪವಾಸ ಸತ್ಯಾಗ್ರಹ ಮತ್ತು ೧೮ ಬಾರಿ ಧರಣಿ, ೩ ಬಾರಿ ಬಂದ್, ೧೪ ಬಾರಿ ಮೆರವಣಿಗೆ ನಡೆದಿದ್ದವು. ೧೯೮೫ರಲ್ಲಿ ಒಂದೆರಡು ಬಾರಿ, ಸಣ್ಣ ವಿಷಯಗಳಿಗಾಗಿ ಆಳಂದದಲ್ಲಿ, ಘರ್ಷಣೆಗಳಾಗಿದ್ದವು. ಸುಮಾರು ೧೯೫ವಿದ್ಯಾರ್ಥಿಗಳ ಗಲಭೆ, ೨೯ ಬಾರಿ ಉಪವಾಸ ಸತ್ಯಾಗ್ರಹ ೧೬ ಧರಣಾಗಳು, ೫ ಬಂದ್‌ಗಳು, ೬೦ ಮೆರವಣಿಗೆಗಳು, ೧೦ ರಸ್ತೆ ರೋಕೋ ಚಳುವಳಿಗಳಾಗಿದ್ದವು.

೧೯೮೬ರಲ್ಲಿ ಗುಲಬರ್ಗಾದಲ್ಲಿನ ಗಂಜ್ ಪ್ರದೇಶದಲ್ಲಿ ಲಾರಿ ಅಘಘಾತದಿಂದ ದೊಡ್ಡ ಘರ್ಷಣೆ ಆಗಿದ್ದಿತು. ೨೫ ವಿದ್ಯಾರ್ಥಿ ಚಳುವಳಿಗಳು, ೧೫ ಉಪವಾಸ ಸತ್ಯಾಗ್ರಹಗಳು ೧೨ ಧರಣಿ ಸತ್ಯಾಗ್ರಹ, ೭ ಬಂದ್‌ಗಳು, ೩೦ ಮೆರವಣಿಗೆಗಳು, ೧೦ ಬಾಯ್ ಕಾಟ್‌ಗಳು, ೧೨ ರಸ್ತೆ ರೋಕೋ ಪ್ರದರ್ಶನಗಳು ನಡೆದಿದ್ದವು. ಒಮ್ಮೆ ೧೪೪ನೇ ಕಲಮಿನಂತೆ ೬ ದಿನಗಳು ನಿಶೇಧಾಜ್ಞೆಯನ್ನು, ಮತ್ತೊಮ್ಮೆ ಲಾಠಿ ಪ್ರಹಾರವನ್ನೂ ಮತ್ತು ಆಶ್ರುವಾಯು ಪ್ರಯೋಗವನ್ನು ಒಮ್ಮೆಯೂ ಈ ಸಾಲಿನಲ್ಲಿ ಮಾಡಲಾಗಿತ್ತು.

೧೯೮೭ರಲ್ಲಿನ ಚುನಾವಣೆ ಸಮಯದಲ್ಲಿ, ಸಣ್ಣ ಗಲಭೆಗಳಾಗಿದ್ದವು. ೩೦ ವಿದ್ಯಾರ್ಥಿಗಳ ಚಳುವಳಿ, ೬೫ ಮೆರವಣಿಗೆಗಳು, ೧೩ ಉಪವಾಸ ಸತ್ಯಾಗ್ರಹ, ೭ ಬಾಯ್‌ಕಾಟ್‌ಗಳು, ೯ ಧರಣಿಸತ್ಯಾಗ್ರಹ, ೪ ಬಂದ್‌ಗಳು ನಡೆದವು.

೧೯೮೮ರಲ್ಲಿ ೨೩ ವಿದ್ಯಾರ್ಥಿ ಚಳುವಳಿಗಳೂ, ೭೫ ಮೆರವಣಿಗೆಗಳೂ, ೨೭ ಉಪವಾಸ ಸತ್ಯಾಗ್ರಹ, ೭ ಬಾಯ್‌ಕಾಟ್, ೧೦ ಧರಣಿ ಸತ್ಸಾಗ್ರಹ, ಒಮ್ಮೆ ಬಂದ್ ೨೧ ಬಾರಿ ರಸ್ತೆ ರೋಕೋ ಚಳುವಳಿ ನಡೆದಿದ್ದವು. ೧೯೮೯ರಲ್ಲಿ ಚಿಂಚೋಳಿ ಮತ್ತು ಗಾಜ್‌ಲ್‌ಖೇಡಗಳಲ್ಲಿ ಕೋಮು ಗಲಭೆಗಳಾಗಿದ್ದವು. ಇದಲ್ಲದೆ ೨೦ ಉಪವಾಸ ಸತ್ಯಾಗ್ರಹ, ೨೩ ಮೆರವಣಿಗೆ, ೧೪ ರಸ್ತೆ ರೋಕೋ ಸತ್ಯಾಗ್ರಹ, ೮ ಬಾಯ್‌ಕಾಟ್ ೩ ಘೆರಾವೋ ಚಳುವಳಿ, ೬ ಧರಣಿ ಸತ್ಯಾಗ್ರಹ, ೫ ಕಾರ್ಮಿಕರ ಚಳುವಳಿ, ನಡೆದಿದ್ದವು.

೧೯೯೦ರಲ್ಲಿ ಗುಲಬರ್ಗಾದ ಬ್ರಹ್ಮಪುರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ, ಪೋಲೀಸ್ ಠಾಣೆಯಲ್ಲಿ ನಡೆದ ಸಾವಿನ ಬಗ್ಗೆ ಗಲಭೆಗಳಾಗಿದ್ದಿತು. ಮತ್ತು ೨೦ ಉಪವಾಸ ಸತ್ಯಾಗ್ರಹ, ೪೯ ಮೆರವಣಿಗೆಗಳು, ೯ ಬಾಯ್‌ಕಾಟ್, ೧೮ ಧರಣಿ ಸತ್ಯಾಗ್ರಹ ೬ ಬಾರಿ ಬಂದ್, ನಡೆದಿದ್ದವು.

೧೯೯೧ರಲ್ಲಿ ಕಾರು ಹುಣ್ಣಿಮೆ ಸಂದರ್ಭದಲ್ಲಿ ಶಹಾಬಾದಿನಲ್ಲಿ ಗಲಭೆಗಳಾಗಿದ್ದವು. ೪೦ ಮೆರವಣಿಗೆ, ೧೬ ಉಪವಾಸ ಸತ್ಯಾಗ್ರಹ, ೨೨ ರಸ್ತೆ ರೋಕೋ ಸತ್ಯಾಗ್ರಹ; ೧೧ ಬಾಯ್‌ಕಾಟ್, ೧೯ ಧರಣಿ ಸತ್ಯಾಗ್ರಹಗಳು ನಡೆದಿದ್ದವು.

ಡಿಸೆಂಬರ್ ೯೨ರಲ್ಲಿ ಜಿಲ್ಲೆಯಲ್ಲಿ ಅಯೋಧ್ಯ - ಬಾಬ್ರಿ ಮಸೀದಿ ಗಲಭೆಗಳಲ್ಲಿ ಆದ ಗಲಭೆಗಳು - ೨೯೭, ಸತ್ತವರ ಸಂಖ್ಯೆ ೧೨, ಗಾಯಗೊಂಡವರು ೯೬, ಗಾಯ ಗೊಂಡ ಪೋಲೀಸರು ೩೮, ನಾಶಮಾಡಲ್ಪಟ್ಟ ಮತೀಯ ಕಟ್ಟಡಗಳು ೩೦೨, ಪೋಲೀಸರು ಗುಂಡು ಹಾರಿಸಿದುದು ೬ ಬಾರಿ, ಕರಫ್ಯೂ ಅದೇಶ ಕೊಟ್ಟಿದ್ದು ೫ ಬಾರಿ, ಇದಲ್ಲದೆ ೨೮ ಬಾರಿ ಮೆರವಣಿಗೆಗಳು ೧೮ ಧರಣಿ ಸತ್ಯಾಗ್ರಹ, ೧೬ ಉಪವಾಸ ಸತ್ಯಾಗ್ರಹ, ೨೭ ರಸ್ತೆ ರೋಕೋ ಚಳುವಳಿ, ೮ ಬಂದ್‌ಗಳು ಮತ್ತು ೧೧ ಬಾಯ್ ಕಾಟ್‌ಗಳು ನಡೆದವು. ೧೯೯೨ರಲ್ಲಿ ನಾಖಬಂದಿಯನ್ನು ಅನುಸರಿಸಿ ಹಗಲುರಾತ್ರಿ ಎಚ್ಚರಿಕೆಯಿಂದ ಪೋಲೀಸರು ಇರುತ್ತಿದ್ದರು. ೧೯೯೪ರಲ್ಲಿ ೪೬ ಮೆರವಣಿಗೆಗಳು, ೧೧ ಧರಣಿ ಸತ್ಯಾಗ್ರಹ, ೧೦ ಉಪವಾಸ ಸತ್ಯಾಗ್ರಹ, ೧೪ ರಸ್ತೆ ರೋಕೋ ಸತ್ಯಾಗ್ರಹ, ೭ ಬಾಯ್‌ಕಾಟ್, ೩ ಬಂದ್ ಗಳಾಗಿದ್ದವು.

೧೯೯೫ ನವೆಂಬರ್‌ನಲ್ಲಿ ಗುಲಬರ್ಗಾ ನಗರದಲ್ಲಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸಮತಾ ಸೈನಿಕ ದಳ, ಭಾರತೀಯ ಭೌದ್ಧ ಮಹಾ ಸಭಾ, ದಲಿತ ಪಣತ್ತಾರ ಹಾಗೂ ಇತರ ದಲಿತ ಸಂಸ್ಥೆಗಳು ಬೆಂಗಳೂರಿನ ಡಾ|| ಅಂಬೇಡ್ಕರ್‌ರರ ವೈದ್ಯಕೀಯ ಕಾಲೇಜಿನಲ್ಲಿ ಡಾ ಅಂಬೇಡ್ಕರ ಅವರ ಪ್ರತಿಮೆಗೆ ಉಂಟಾದ ಅಪಚಾರವನ್ನು ಖಂಡಿಸುತ್ತಾ ಮೆರವಣಿಗೆ, ರಸ್ತೆ ರೋಕೋ ಮೊದಲಾದ ಚಳುವಳಿಗಳನ್ನು ನಡೆಸಿದರು. ಈ ಬಗ್ಗೆ ನಗರದಲ್ಲಿ ಗಲಭೆಗಳಾಗಿ ಅಸ್ತಿಪಾಸ್ತಿ ನಷ್ಟ ಸುಮಾರು ೨೨ ಲಕ್ಷ ರೂ.ಗಳಷ್ಟು ಆಗಿದ್ದಿತು. ೨೭ ರಾಜ್ಯ ಸಾರಿಗೆ ಬಸ್ಸು, ೧೧ ಖಾಸಗಿ ಬಸ್ಸು, ೪ ಸರಕಾರಿ ವಾಹನ ೨

ಅರೆ ಸರ್ಕಾರಿ ವಾಹನಗಳು ಹಾಳಾದವು. ೬ ಮಂದಿಗೆ ಗಾಯಗಳಾದವು.

ಮತೀಯ ಗಲಭೆಗಳು :- ಜನವರಿ ೯೫ರಲ್ಲಿ ಮಾಶಾಲ್ ಗ್ರಾಮದಲ್ಲಿ ಮಾರ್ಚ್‌ನಲ್ಲಿ ಖಂಡಾಲಗ್ರಾಮದಲ್ಲಿ, ಜೂನ್ ೯೫ರಲ್ಲಿ ಕೋಚಾವರಂ ಗ್ರಾಮದಲ್ಲಿ ಡಿಸೆಂಬರ್ ೯೫ರಲ್ಲಿ ಯಾದಗಿರ್ ಪಟ್ಟಣದಲ್ಲಿ ಹಾಗೂ ಗುಲಬರ್ಗಾದಲ್ಲಿ ೬-೧೨-೯೫ರಂದು ಮತೀಯ ಗಲಭೆಗಳಾದ ವರದಿಯಾಗಿದೆ.

ಕಾರ್ಮಿಕರ ಗಲಭೆಗಳು :- ೧೯೯೫ ನೇ ಸಾಲಿನಲ್ಲಿ ಹೆಚ್ಚಿನ ಕಾರ್ಮಿಕರ ಗಲಭೆಗಳಾಗಲಿಲ್ಲ. ಗುಲಬರ್ಗಾ ಮಹಾನಗರ ಸಭೆಯ ಸುಮಾರು ೨೫೦ ದಿನಕೂಲಿ ನೌಕರರು ತಮ್ಮ ಸೇವೆಯನ್ನು ಖಾಯ ಮಾಡಬೇಕೆಂದು ಗಲಭೆ, ಉಪವಾಸ ಸತ್ಯಾಗ್ರಹ ಮಾಡಿದರು.

ವಿದ್ಯಾರ್ಥಿ ಗಲಭೆಗಳು : ಆಳಂದದಲ್ಲಿ ಏಪ್ರಿಲ್ ೯೫ರಲ್ಲಿ ವಿದ್ಯಾರ್ಥಿಗಳು ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷಾ ತನಿಖಾ ದಳ ಬಂದಾಗ ಗಲಭೆಗಳಾಗಿದ್ದವು.

ಗುಲಬರ್ಗಾ ಜಿಲ್ಲೆಯಲ್ಲಿ ಅಪರಾಧಗಳ ತನಿಖೆಯ ಶೇಕಡಾ

ಗುಲಬರ್ಗಾ ಜಿಲ್ಲೆಯಲ್ಲಿ ಅಪರಾಧಗಳ ತನಿಖೆಯ ಶೇಕಡಾ ಈ ರೀತಿ ಇದ್ದಿತು. ೧೯೮೨ - ೭೪.೬, ೧೯೮೩ - ೭೨.೩, ೧೯೮೪ - ೬೭.೮, ೧೯೮೫-೯೬, ೧೯೮೬-೭೯, ೧೯೮೮-೮೨, ೧೯೮೯-೭೫.೧೦, ೧೯೯೦ -೬೩.೫೧, ೧೯೯೧ -೭೦-೫೦, ೧೯೯೨-೬೩.೧೭, ೧೯೯೩-೮೦-೪೫, ೧೯೯೪-೭೮.೨೬, ೧೯೯೫-೮೦-೮೭

ಹೆಚ್ಚು ಕಡಿಮೆ ಅಪರಾಧಗಳ ತನಿಖೆ ಶೇ ೬೫-೭೦ರದ್ದಿತು.

**ಕೋಷ್ಟಕ ೧೦.೭**

ಗುಲಬರ್ಗಾ ಜಿಲ್ಲೆಯಲ್ಲಿನ ೧೯೮೨ ರಿಂದ ೧೯೯೫ ರವರೆಗೆ ಸಂಭವಿಸಿದ ವಿವಿಧ ಅಪರಾಧಗಳು

| | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೧ | ೧೯೯೨ | ೧೯೯೩ | ೧೯೯೪ | ೧೯೯೫ |
|---|---|---|---|---|---|---|---|---|---|---|---|---|---|---|
| ಕೊಲೆ | ೫೦ | ೫೦ | ೭೧ | ೪೦ | ೫೨ | ೬೧ | ೭೬ | ೫೭ | ೭೦ | ೬೩ | ೫೫ | ೯೧ | ೮೩ | ೯೦ |
| ಡಕಾಯಿತಿ | ೭ | ೫ | ೨ | ೫ | ೪ | ೧೧ | ೭ | ೧೧ | ೧೧ | ೧೩ | ೪೭ | ೨೪ | ೧೧ | ೧೧ |
| ರಾಬರಿ (ದರೋಡೆ) | ೨೭ | ೨೧ | ೧೦ | ೯ | ೧೯ | ೧೩ | ೨೫ | ೧೧ | ೧೪ | ೩೨ | ೨೯ | ೩೫ | ೩೫ | ೩೧ |
| ಕಳ್ಳತನ ಮತ್ತು ಮನೆ ಕನ್ನಹಾಕುವುದು | ೪೮ | ೩೨ | ೨೦ | ೫೦ | ೧೯ | ೨೩ | ೩೪ | ೨೬ | ೪೧ | ೪೮ | ೫೩ | ೬೪ | ೮೫ | ೭೦ |
| ಕಳ್ಳತನ | ೧೭ | ೧೫ | ೯ | ೨೩ | ೧೨ | ೬ | ೧೫ | ೭೦ | ೨೭ | ೧೯ | ೧೧೩ | ೫೮ | ೫೮ | ೫೩ |
| ಜಾನುವಾರು ಕಳ್ಳತನ | -- | -- | -- | ೧೧ | -- | -- | -- | -- | ೧ | -- | -- | -- | -- | -- |
| ರಾತ್ರಿ | -- | ೨೮ | ೮ | ೪ | -- | -- | -- | -- | -- | -- | ೬ | -- | -- | -- |
| ಸಿ.ಆರ್. ಆಕ್ಟ್ | ೨೧ | ೪೦ | ೧೬ | ೩೧ | ೬೧ | ೪೯ | ೭೨ | ೮೦ | ೧೦೬ | ೮೩ | ೬೯ | ೫೪ | ೫೦ | ೫ |

ಆಧಾರ : ಪೋಲೀಸ್ ಇಲಾಖೆ, ಗುಲಬರ್ಗಾ

**ಕೋಷ್ಟಕ ೧೦.೮**

ಗುಲಬರ್ಗಾ ಜಿಲ್ಲೆಯಲ್ಲಿ ಕೆಲವು ವಿಶೇಷ ಹಾಗೂ ಸ್ಥಳೀಯ ಅಧಿನಿಯಮಗಳಿಗೆ ಸಂಬಂಧಪಟ್ಟ ಅಪರಾಧಗಳು

| | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೧ | ೧೯೯೨ | ೧೯೯೩ | ೧೯೯೪ | ೧೯೯೫ |
|---|---|---|---|---|---|---|---|---|---|---|---|---|---|---|
| ೧. ಭಾರತೀಯ ಶಸ್ತ್ರಾಸ್ತ್ರ ಅಧಿ ನಿಯಮ | ೪ | ೨ | ೧೪ | ೯ | ೫ | ೪ | ೧ | ೫ | ೨ | ೨ | ೩ | ೨ | ೨ | ೬ |
| ೨. ಜೂಜು ನಿಯಮ | ೭೮೦ | ೯೩೧ | ೫೦೮ | ೧,೩೦೦ | ೧,೦೨೬ | ೨೦೩ | ೨೧೧ | ೩೧೧ | ೨೭೧ | ೪೧೩ | ೩೩೭ | ೪೯೫ | ೬೩೨ | ೫೨೬ |
| ೩. ಅಬಕಾರಿ ಅಧಿನಿಯಮ | ೪೧ | ೧೨ | ೧೫ | ೧೦ | ೩೨ | ೩೯ | ೩೮ | ೩೫ | ೧೬೪ | ೧೦೧ | ೨೮ | ೪೮ | ೪೮ | ೩೩ |
| ೪. ಸಿಡಿಯುವ ವಸ್ತುಗಳ ಅಧಿನಿಯಮ | ೮ | ೪ | ೪ | ೩ | ೧ | ೧ | ೧ | ೫ | ೧ | ೪ | ೨ | ೪ | ೨ | -- |
| ೫. ಕರ್ನಾಟಕ ಪೋಲೀಸ್ ಕಾಯ್ದೆ | ೫೯೦ | ೮೭೫ | ೯೨೭ | ೬,೨೯೯ | ೭,೯೧೭ | ೫,೦೩೦ | ೨,೪೮೮ | ೨,೫೪೮ | ೪,೯೬೫ | ೮,೦೫೭ | ೫,೩೬೪ | ೫,೮೫೪ | ೪,೯೯೦ | ೫,೨೬೪ |
| ೬. ಸಾಕು ಪ್ರಾಣಿಗಳ ಮೇಲೆ ಹಿಂಸಾಚಾರ ತಡೆಯುವ ಅಧಿನಿಯಮ | -- | -- | -- | -- | -- | ೧ | ೩ | -- | ೧ | -- | ೨ | ೪ | ೨ | ೩ |
| ೭. ಮೋಟಾರು ವಾಹನ ಅಧಿನಿಯಮ | ೬,೧೮೭ | ೫,೪೧೯ | ೪,೫೨೩ | ೬,೧೨೫ | ೮,೩೧೫ | ೧೧,೯೮೫ | ೧೦,೮೦೦ | ೧೧,೨೬೫ | ೧೨,೭೭೮ | ೧೧,೮೧೯ | ೧೪,೫೦೭ | ೮,೭೩೧ | ೧೨,೦೩೧ | ೧೭,೯೭೧ |
| ೮. ಪಿ.ಸಿ.ಆರ್. ಅಧಿನಿಯಮ | ೪೦ | ೨೧ | ೧೬ | ೩೧ | ೬೧ | ೪೯ | ೭೨ | ೯೦ | ೧೦೬ | ೮೩ | ೬೯ | ೯೪ | ೧೦೨ | ೧೦೮ |
| ೯. ಚುನಾವಣೆ ಕಾಯ್ದೆ | ೪೮ | ೯೯ | ೨೮ | ೩೦ | ೫೧ | ೪೧ | ೨೮ | ೧೪ | ೬೮ | ೫೯ | ೫೭ | ೬೩ | ೪೧ | ೬೪ |
| ೧೦. ಮಹಿಳೆಯರ ಮೇಲೆ ಅನೈತಿಕ ಅಧಿನಿಯಮ | ೪೮ | ೬೦ | ೪೩ | ೩೬ | ೪೩ | ೧೩ | ೧೭ | -- | -- | ೨ | ೧ | -- | -- | ೧ |
| ೧೧. ವಿದೇಶಿಯದ ನಿಯಮ | -- | -- | -- | ೨ | ೨ | -- | -- | -- | -- | -- | -- | -- | -- | |
| ೧೨. ಇತರೆ ಅಧಿನಿಯಮಗಳು | ೧,೨೬೮ | ೭೪೮ | ೩೧೧ | ೪೨೪ | ೫೧೫ | ೫೩೯೦ | ೫೭೩೦ | ೧೪೫೦ | ೨೪೨೩ | ೮೪೧೪ | ೭೩೮೯ | ಲವಿ | ಲವಿ | ಲವಿ |

**ಕೋಷ್ಟಕ ೧೦.೧೦**

ಗುಲಬರ್ಗಾ ಜಿಲ್ಲೆಯಲ್ಲಿ ೧೯೮೨ ರಿಂದ ೧೯೯೧ರ ವರೆಗಿನ ಅವಧಿಯಲ್ಲಿ ಉಂಟಾದ ಸಾವು ಮತ್ತು ಅವುಗಳ ಕಾರಣಗಳು

| ವಿವರ | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೧ |
|---|---|---|---|---|---|---|---|---|---|---|
| ಅಪಘಾತ (ಬೀಳುವುದು) | ೧೨೧ | ೧೪೭ | ೧೫೦ | ೧೪೭ | ೮೫ | ೯೦ | ೧೦೦ | ೨೪೦ | ೧೨೦ | ೯೦ |
| ಆತ್ಮಹತ್ಯೆ (ಬೀಳುವುದು) | ೮೩ | ೨೦ | ೩೦ | ೩೫ | ೨೪ | ೨೨ | ೨೦ | ೨೬ | ೩೦ | ೨೯ |
| ಹಾವು ಕಚ್ಚಿ ಸಾಯುವುದು | ೩೦ | ೧೦ | ೨೦ | ೭ | ೧೭ | ೯ | ೧೯ | ೫೦ | ೬ | ೨೫ |
| ಆತ್ಮಹತ್ಯೆ (ನೇಣು ಹಾಕಿಕೊಳ್ಳುವುದು) | ೭೮ | ೨೭ | ೩೫ | ೨೯ | ೬೪ | ೧೪ | ೬೫ | ೨೩ | ೫೮ | ೪೦ |
| ವಿದ್ಯುತ್ ಶಾಕ್ | ೧೨ | ೨ | ೪ | — | ೧೧ | ೧೦ | ೧೦ | ೫ | — | — |
| ಬೆಂಕಿಯಿಂದ ಅಪಘಾತ | ೧೦ | ೬ | ೮ | — | — | — | — | — | — | — |
| ಸಿಡಿಲು - ಗುಡುಗು | ೪ | ೪ | ೫ | — | ೪೫ | ೩೦ | ೧೦ | ೧೮ | ೪ | ೧೨ |
| ಸಣ್ಣ ಅಪಘಾತ | ೩ | ೨ | ೨ | — | — | — | — | — | — | — |
| ವಿಷ ಸೇವನೆ | ೧೧ | ೭೩ | ೭೫ | ೭೦ | ೬೫ | ೨೭ | ೮೫ | ೧೨೦ | ೯೦ | ೧೧೨ |
| ಎತ್ತರದಿಂದ ಬೀಳುವಿಕೆ | — | — | — | — | ೪ | ೬ | — | ೧೦ | — | — |
| ಇತರೆ ಕಾರಣಗಳು | ೯೫ | ೪೨ | ೬೪ | ೩೮ | ೯೦ | ೧೧೭ | ೩೧ | ೫೫ | ೧೪೮ | ೧೮೪ |

## ಕೋಷ್ಟಕ ೧೦.೧೧

### ಗುಲಬರ್ಗಾ ಜಿಲ್ಲೆಯಲ್ಲಿ ೧೯೮೨ ರಿಂದ ೧೯೯೫ರ ವರೆಗೆ ಆಸ್ತಿ ಪಾಸ್ತಿ ನಷ್ಟ ಹಾಗೂ ಅವುಗಳನ್ನು ಪುನಃ ಪಡೆದಿರುವುದು

| ವರ್ಷ | ಆಸ್ತಿಪಾಸ್ತಿ ನಷ್ಟದ ಮೌಲ್ಯ (ಲಕ್ಷ ರೂ.) | ಪತ್ತೆ ಹಚ್ಚಿದ ಆಸ್ತಿ ಮೌಲ್ಯ (ಲಕ್ಷ ರೂ.) | ಶೇಕಡಾ |
|---|---|---|---|
| ೧೯೮೨ | ೧೨,೧೨ | ೪,೬೯ | ೨೭.೭೮ |
| ೧೯೮೩ | ೧೪,೫೮ | ೫,೦೮ | ೩೪.೮ |
| ೧೯೮೪ | ೧೬,೪೫ | ೧,೯೭ | ೧೨ |
| ೧೯೮೫ | ೧೫,೦೦ | ೩,೧೯ | ೨೧.೨ |
| ೧೯೮೬ | ೧೫,೫೧ | ೮,೨೧ | ೫೨.೯೧ |
| ೧೯೮೭ | ೧೩,೯೪ | ೫,೩೬ | ೩೮.೫ |
| ೧೯೮೮ | ೩೧,೬೪ | ೯,೭೭ | ೩೯.೬೬ |
| ೧೯೯೦ | ೪೨,೬೮ | ೧೨,೪೩ | ೩೯ |
| ೧೯೯೧ | ೫,೨೯ | ೯೨ | ೨೨ |
| ೧೯೯೨ | ೧೩೦,೯೨ | ೨೫,೮೨ | ೧೯.೮೧ |
| ೧೯೯೩ | ೬೩,೩೪ | ೨೭,೫೪ | ೪೩.೪೭ |
| ೧೯೯೪ | ೭೧,೩೦ | ೨೧,೭೨ | ೩೦.೪೬ |
| ೧೯೯೫ | ೬೯,೮೭ | ೧೧,೧೪ | ೧೫.೯೪ |

**ಕೋಷ್ಟಕ ೧೦.೧೨**

ಗುಲಬರ್ಗಾ ಜಿಲ್ಲೆಯಲ್ಲಿ ೧೯೮೨ ರಿಂದ ೧೯೯೧ರ ವರೆಗೆ ಆದ ಅಪರಾಧಗಳ (ಕಂಡು ಹಿಡಿದದ್ದು) (ಶೇಕಡಾ ಪ್ರಮಾಣ)

| ವಿವರ | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೧ | ೧೯೯೩ | ೧೯೯೪ | ೧೯೯೫ |
|---|---|---|---|---|---|---|---|---|---|---|---|---|---|
| ಕೊಲೆ | ೨೬ | ೯೦ | ೪೮ | ೯೭.೫ | ೯೮.೮ | ೯೫.೫ | ೫೨.೬ | ೭೭ | ೭೦ | ೮೦ | ೯೧ | ೮೩ | ೯೦ |
| ಡಕಾಯಿತಿ | ೧೦೦ | — | — | ೬೦ | ೨೫ | ೭೨.೭ | ೭೧ | ೧೧ | ೧೦ | ೮ | ೮೩ | — | ೭೫ |
| ದರೋಡೆ | ೨೪.೩ | ೬೧.೯ | ೩೯.೩ | ೮೫.೬ | ೫೨.೬ | ೬೧.೫ | ೭೬ | ೬೧.೫ | ೩೭ | ೪೫ | ೮೨ | — | ೭೬ |
| ಮನೆ ಮುರಿಯುವುದು ಮತ್ತು ಕಳ್ಳತನ | ೩.೩ | ೨೨.೬ | ೨೪.೯ | ೫೦ | ೨೦.೯ | ೨೬.೫ | ೧೯.೫ | ೨೨ | ೪೧ | ೫೦ | ೫೫ | — | ೬೦ |
| ಜಾನುವಾರು ಕಳ್ಳತನ | ೫೪.೫ | ೫೮.೩ | ೨೩ | ೯೬ | ೬೬.೬ | ೫೩.೫ | ೩೦ | ೩೨ | ೪೬ | ೪೫ | ೪೫ | — | ೫೫೫ |
| ಇತರೆ ಕಳ್ಳತನ | ೩೭.೫ | ೨೭.೮ | ೫೩ | ೩೭ | ೪೩.೮೯ | ೭೨.೭ | ೩೯.೮ | ೩೬ | ೨೧ | ೪೦ | ೪೭ | — | ೫೬ |

**ಕೋಷ್ಟಕ ೧೦.೧೩**

ಗುಲಬರ್ಗಾ ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಯ ವಿವರ (೧೯೮೪ ರಿಂದ ೧೯೯೫)

| ಸಿಬ್ಬಂದಿಯ ಪದನಾಮ | ೧೯೮೩ | ೧೯೮೬ | ೧೯೮೮ | ೧೯೯೧ | ೧೯೯೨ | ೧೯೯೩ | ೧೯೯೪ | ೧೯೯೫ |
|---|---|---|---|---|---|---|---|---|
| ಪೋಲೀಸ್ ಅಧೀಕ್ಷಕರು | ೧ | ೧ | ೧ | ೧ | ೧ | ೧ | ೧ | ೧ |
| ಅಧಿಕ ಪೋಲೀಸ್ ಅಧೀಕ್ಷಕರು | ೧ | ೧ | ೧ | ೧ | ೧ | ೧ | ೧ | ೧ |
| ಡೆಪ್ಯೂಟಿ ಪೋಲೀಸ್ ಅಧೀಕ್ಷಕರು | ೪ | ೪ | ೪ | ೪ | ೪ | ೪ | ೮ | ೯ |
| ವೃತ್ತ ನಿರೀಕ್ಷಕರು (ಸಿ.ಐ) | ೧೨ | ೧೩ | ೧೩ | ೧೭ | ೧೮ | ೧೮ | ೨೬ | ೨೬ |
| ಸಬ್ ಇನ್‌ಸ್ಪೆಕ್ಟರ್ | ೫೧ | ೫೧ | ೫೧ | ೫೦ | ೪೩ | ೫೫ | ೫೬ | ೧೭೩ (ಸಬ್ ಇನ್‌ಸ್ಪೆಕ್ಟರ್ ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಸೇರಿ) |
| ಸಹಾಯಕ ಸಬ್ ಇನ್‌ಸ್ಪೆಕ್ಟರ್ | ೮ | ೧೧ | ೧೧ | ೫೮ | ೫೮ | ೮೦ | ೧೦೭ | |
| ಹೆಡ್‌ಕಾನ್‌ಸ್ಟೇಬಲ್ | ೨೦೪ | ೨೦೪ | ೨೦೪ | ೨೮೭ | ೩೬೫ | -- | ೪೦೬ | ೪೦೬ |
| ಕಾನ್‌ಸ್ಟೇಬಲ್ | ೯೯೬ | ೯೯೬ | ೯೯೬ | ೯೬೫ | ೧೨೦೦ | -- | ೧೨೫೮ | ೧೨೫೮ |
| ಮಹಿಳಾ ಪೋಲೀಸ್ ಶಸಸ್ತ್ರದಳ | -- | -- | -- | -- | ೮ | -- | ೩೦ | ೩೦ |
| ರಿಸರ್ವ ಪೋಲಿಸ್ ಇನ್‌ಸ್ಪೆಕ್ಟರ | ೧ | ೧ | ೧ | ೧ | ೩ | -- | ೩ | ೩+೧ ಡಿಎಸ್.ಪಿ |
| ರಿಸವ್ ಸಬ್‌ಇನ್‌ಸ್ಪೆಕ್ಟರ್ | ೫ | ೮ | ೮ | ೮ | ೮ | -- | ೮ | ೮ |
| ಸಹಾಯಕ ಸಬ್‌ಇನ್‌ಸ್ಪೆಕ್ಟರ್ | ೮ | ೮ | ೮ | ೮ | ೧೮ | ಲವಿ | ೧೮ | ೧೮ |
| ಎ.ಹೆಚ್.ಸಿ | ೭೩ | ೮೩ | ೮೧ | ೮೪ | ೬೮ | ಲವಿ | ೭೨ | ೭೨ |
| ರಿ. ಕ್ಯಾನ್‌ಸ್ಟೇಬಲ್ | ೩೨೬ | ೩೬೧ | ೩೫೭ | ೩೫೮ | ೩೪೨ | ಲವಿ | ೩೫೮ | ೩೫೮ |
| ಒಟ್ಟು | ೧೬೯೦ | ೧೭೪೨ | ೧೭೨೩ | ೧೮೪೨ | ೨೧೭೫ | ಲವಿ | ೨೩೫೨ | ೨೩೬೪ |

(ಆಧಾರ - ಪೋಲೀಸ್ ಇಲಾಖೆ - ಗುಲಬರ್ಗಾ)

## ಗುಲಬರ್ಗಾ ಜಿಲ್ಲೆಯಲ್ಲಿ ಪೋಲೀಸ್ ಇಲಾಖೆಯ ಖರ್ಚು

**೧೯೮೪ ರಿಂದ ೧೯೯೫**

**ಕೋಷ್ಟಕ ೧೦.೧೪**

| ವರ್ಷ | ಒಟ್ಟು ಖರ್ಚು (ಲಕ್ಷ ರೂ) | ಪ್ರತಿ ಪೋಲೀಸ್ ಸಿಬ್ಬಂದಿಗೆ ಖರ್ಚು |
|---|---|---|
| ೧೯೮೪ | ೨೫೧.೧೦ | ೧೪,೮೫೮ |
| ೧೯೮೬ | ೩೭೫.೦೩ | ೨೧೫೩೧ |
| ೧೯೮೮ | ೩೫೪.೫೫ | ೨೦೪೫೯ |
| ೧೯೯೦ | ೩೪೭.೦೨ | -- |
| ೧೯೯೧ | ೪೭೮.೯೫ | ೨೬೦೦೧ |
| ೧೯೯೩ | ೮೨೯.೩೩ | ೩೮೧೩೦ |
| ೧೯೯೪ | ೯೫೬.೫೮ | ೩೯೯೯೧ |
| ೧೯೯೫ | ೧೦೫೩.೩೫ | ೬೪೭೪೨ |

ಗುಲಬರ್ಗಾ ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಗೆ ನೀಡಲ್ಪಟ್ಟ ಬಹುಮಾನಗಳು ಹಾಗೂ ಇತರ ಪ್ರಶಸ್ತಿಗಳ ವಿವರ

೧೯೮೬ರಲ್ಲಿ ೬೨೮ ಪೋಲೀಸ್ ಸಿಬ್ಬಂದಿಗೆ ನಗದು ಪ್ರಶಸ್ತಿ ೧೯೮೭ - (೨೩೨), ೧೯೮೮ - (೨೭೧೧), ೧೯೮೯ - (೪೩೩), ೧೯೯೦ - (೧೪೫೦), ೧೯೯೧- (೬೧೫), ೧೯೯೨ - (೧೮೦), ೧೯೯೩ (೫೫೬), ೧೯೯೪ - (೨೦೭) ಮತ್ತು ೧೯೯೫ರಲ್ಲಿ ೩೬೦ ಪೋಲೀಸ್ ಸಿಬ್ಬಂದಿಗಳು

೧೯೯೧ರಲ್ಲಿ ಶ್ರೀ ಪಿ. ಎನ್. ಮಾಲಿ ಪಾಟೀಲ್ ಶಹಬಾದ್ ಇವರಿಗೆ ಪೋಲೀಸ್ ಮೆಡಲ್ ನೀಡಲಾಗಿತ್ತು.

ಗುಲಬರ್ಗಾ ಜಿಲ್ಲೆಯಲ್ಲಿ ಪೋಲೀಸ್ ಇಲಾಖೆಯ ಕೆಲವು ಪ್ರಮುಖ ಸೂಚಿಗಳು ೧೯೯೪-೧೯೯೫ರಲ್ಲಿ

| ವಿವರ | ೧೯೯೪ | ೧೯೯೫ |
|---|---|---|
| ೧೦೦೦ ಜನ ಸಂಖ್ಯೆಗೆ ಪೋಲೀಸ್ ಸಿಬ್ಬಂದಿ | .೯೧ | .೯೧ |
| ೧೦೦೦ ಚ. ಕಿಮೀ ವಿಸ್ತೀರ್ಣಕ್ಕೆ ಪೋಲೀಸ್ ಸಿಬ್ಬಂದಿ | ೧೪೪.೯೭ | ೧೪೫.೭೭ |
| ಪ್ರತಿ ಪೋಲೀಸ್ ಸಿಬ್ಬಂದಿಗೆ ಅಪರಾಧಗಳು | ೧.೫೬ | ೧.೭೦ |
| ೧೦೦೦ ಜನಸಂಖ್ಯೆಗೆ ಅಪರಾಧಗಳು | ೧.೫೫ | ೧.೬೨ |

**ಕೋಷ್ಟಕ ೧೦.೧೩**

ಗುಲಬರ್ಗಾ ಜಿಲ್ಲೆಯಲ್ಲಿ ವರ್ಗವಾರು ಅಪರಾಧಗಳ ಸಂಖ್ಯೆ (೧೯೮೨-೧೯೯೫)

| ವಿವರ | ೧೯೮೨ | ೧೯೮೩ | ೧೯೮೪ | ೧೯೮೫ | ೧೯೮೬ | ೧೯೮೭ | ೧೯೮೮ | ೧೯೮೯ | ೧೯೯೦ | ೧೯೯೨ | ೧೯೯೩ | ೧೯೯೪ | ೧೯೯೫ |
|---|---|---|---|---|---|---|---|---|---|---|---|---|---|
| ೧. ವರ್ಗ - ೧ | ೩೭೭ | ೨೮೬ | ೨೮೭ | ೩೫೧ | ೩೧೨ | ೪೭೧ | ೩೭೯ | ೪೮೪ | ೫೨೬ | ೫೦೦ | ೫೧೩ | ೫೨೬ | ೬೪೪ |
| ೨. ವರ್ಗ - ೨ | ೬೯೯ | ೫೬೬ | ೬೫೦ | ೭೨೦ | ೭೦೦ | ೮೬೮ | ೯೩೫ | ೧೦೨೨ | ೧೦೧೬ | ೧,೬೦೦ | ೧,೫೯೯ | ೧,೮೫೩ | ೧,೯೦೭ |
| ೩. ವರ್ಗ - ೩ | ೩೦೧ | ೨೫೪ | ೨೨೬ | ೨೨೨ | ೧೧೭ | ೯೩ | ೨೮೨ | ೨೬೯ | ೩೫೫ | ೩೭೮ | ೩೭೨ | ೩೬೪ | ೩೫೧ |
| ೪. ವರ್ಗ - ೪ | ೩೩೪ | ೩೩೨ | ೨೯೬ | ೨೮೯ | ೩೧೦ | ೩೫೪ | ೩೧೨ | ೩೪೮ | ೪೩೦ | ೯೧ | ೧೨೬ | ೬೫ | ೧೩೯ |
| ೫. ವರ್ಗ - ೫ | ೬೭೦ | ೫೪೯ | ೪೨೨ | ೩೬೮ | ೬೨೯ | ೪೮೨ | ೪೩೦ | ೫೩೫ | ೫೭೭ | ೮೩೯ | ೫೧೭ | ೫೧೮ | ೪೮೦ |
| ೬. ವರ್ಗ - ೬ | ೯೭ | ೧೬ | ೯೨ | ೩೫ | ೯೯ | ೧೮೬ | ೨೩೧ | ೧೮೯ | ೨೭೦ | ೧೬೯ | ೫೫೭ | ೬೬೮ | ೬೮೨ |
| ಒಟ್ಟು ಮೊತ್ತ | ೨,೪೭೮ | ೨,೧೦೩ | ೧,೯೭೩ | ೧,೯೮೫ | ೨,೧೬೭ | ೨,೪೫೩ | ೨,೫೬೯ | ೨,೮೪೭ | ೩,೧೭೪ | ೩,೫೭೭ | ೩,೬೮೯ | ೩,೯೯೪ | ೪,೨೦೩ |

ವರ್ಗ - ೧ - ಸಾರ್ವಜನಿಕ ಶಾಂತತೆಯ ರಕ್ಷಣೆ ಹಾಗೂ ನ್ಯಾಯದ ವಿರುದ್ಧ ಅಪರಾಧಗಳು

ವರ್ಗ - ೨ - ಜನರ ವಿರುದ್ಧ ನಡೆದ, ಗಂಭೀರ ಅಪರಾಧಗಳು

ವರ್ಗ - ೩ - ಜನರ ಮತ್ತು ಆಸ್ತಿ ವಿರುದ್ಧ ನಡೆದ ಗಂಭೀರ ಅಪರಾಧಗಳು

ವರ್ಗ - ೪ - ಜನರ ವಿರುದ್ಧ ಸಣ್ಣ ಅಪರಾಧಗಳು

ವರ್ಗ - ೫ - ಆಸ್ತಿಯ ವಿರುದ್ಧ ಸಣ್ಣ ಅಪರಾಧಗಳು

ವರ್ಗ - ೬ - ಇತರೆ

**ಕೋಷ್ಟಕ ೧೦.೧೬**

ಗುಲಬರ್ಗಾ ಜಿಲ್ಲೆಯಲ್ಲಿ ಮೋಟಾರು ವಾಹನಗಳು ಮತ್ತು ಅವುಗಳ ಮೇಲಿನ ಮೊಕದ್ದಮೆಗಳ ವಿವರ
(೧೯೯೩ ರಿಂದ ೧೯೯೫ ರವರೆಗೆ)

| ವಿವರ | ೧೯೯೩ | ೧೯೯೪ | ೧೯೯೫ |
|---|---|---|---|
| **ಮೋಟಾರು ವಾಹನಗಳ ಸಂಖ್ಯೆ** | | | |
| ೧. ಮೋಟಾರು ಕಾರು ಮತ್ತು ಜೀಪ್ | ೧,೪೫೮ | ೧,೫೪೬ | ೨,೪೭೪ |
| ೨. ಬಸ್ಸು | ೮೨೦ | ೨೭೪ | ೮೮೨ |
| ೩. ಲಾರಿಗಳು (ವ್ಯಾನಗಳೂ ಸೇರಿದಂತೆ) | ೧,೮೦೨ | ೧,೭೬೬ | ೨,೧೬೦ |
| ೪. ಟ್ಯಾಕ್ಸಿಗಳು | -- | ೭೪ | ೮೫ |
| ೫. ವ್ಯಾನ್‌ಗಳು | ೯ | ೧೩ | ೮೬ |
| ೬. ಆಟೋರಿಕ್ಷಾ | ೧೬೭೩ | ೧೮೩೧ | ೨೧೩೯ |
| ೭. ಮೋಟಾರ್ ಸೈಕಲ್ | ೨೮,೦೮೦ | ೩೧,೪೦೪ | ೩೪,೧೨೫ |
| ೮. ಇತರೆ ವಾಹನಗಳು | ೩,೮೮೫ | ೬,೦೬೨ | ೪,೯೪೯ |
| **ಸಂಚಾರಿ ನಿಯಮದಂತೆ ಮೊಕದ್ದಮೆಗಳು** | | | |
| ೧. ಅತಿ ವೇಗ | ೧೧೮ | ೧೩೨ | ೧೩೮ |
| ೨. ತೀಕ್ಷ್ಣವಾದ ಬೆಳಕಿನ ದೀಪ | ೧೨೫ | -- | -- |
| ೩. ಸಂಚಾರ ನಿಯಮದ ಉಲ್ಲಂಘನೆ | ೨೧೨ | ೩೪೮ | ೨೬೮ |
| ೪. ಪರ್ಮಿಟ್‌ರಹಿತ ಸಂಚಾರ | ೨೫ | ೩೦ | ೪೨ |
| ೫. ದೋಷ ಪೂರ್ಣ ವಾಹನ ನಡೆಸುವಿಕೆ | ೨೮ | ೩೧ | ೩೩ |
| ೬. ಪರವಾನಗಿ ಇಲ್ಲದೆ ವಾಹನ ನಡೆಸುವುದು | ೧೩೦ | ೧೪೨ | ೧೭೨ |
| ೭. ಅನಧಿಕೃತವಾಗಿ ವ್ಯಕ್ತಿಗಳನ್ನು ಕರೆದುಕೊಂಡು ಹೋಗುವುದು | ೧೧೮ | ೧೨೫ | ೧೮೧ |
| ೮. ಸಾಗಣೆ ವಾಹನಗಳು (ಖಾಸಗಿ ಪರ್ಮಿಟ್ ರಹಿತ) | ೨೨೦ | ೨೫೨ | ೨೬೭ |
| ೯. ಇತರೆ ಸಣ್ಣ ಅಪರಾಧಗಳು | ೧೭,೫೫೫ | ೧೦,೯೭೨ | ೧೬,೭೭೦ |

ಆಧಾರ : ಪೋಲೀಸ್ ಇಲಾಖೆ ವರದಿ - ಗುಲಬರ್ಗಾ.

1995ನೇ ಸಾಲಿನಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಪೋಲೀಸ್ ಇಲಾಖೆಯಿಂದ ನೀಡಲ್ಪಟ್ಟ ಸಮನ್ಸ್ ಹಾಗೂ ವಾರಂಟ್‌ಗಳ ವಿವರ

| | ವಾರಾಂಟ್ | ಸಮನ್ಸ್ |
|---|---|---|
| ವರ್ಷಾರಂಭದಲ್ಲಿ ತೀರ್ಮಾನವಾಗಬೇಕಾಗಿದ್ದವು | 3,532 | 2,907 |
| 1995ನೇ ಸಾಲಿನಲ್ಲಿ ಕೊಡಬೇಕಾದವು | 50,447 | 53,439 |
| ಒಟ್ಟು ಜಾರಿ ಮಾಡಬೇಕಾದವು | 53,979 | 56,346 |
| 1995ನೇ ಸಾಲಿನಲ್ಲಿ ಜಾರಿ ಮಾಡಿದವು | 16,909 | 34,100 |
| ಈ ಸಾಲಿನಲ್ಲಿ ಜಾರಿ ಮಾಡದೇ ಇದ್ದವು | 33,210 | 18,851 |
| ವರ್ಷದ ಆ ಖೈರಿನಲ್ಲಿ ಉಳಿದವು | 3,860 | 3,395 |

(ಆಧಾರ : ಪೋಲೀಸ್ ಆಡಳಿತ ವರದಿ - ಗುಲಬರ್ಗಾ ಜಿಲ್ಲೆ)

## ಪೋಲೀಸ್ ಕಲ್ಯಾಣ ಕಾರ್ಯಕ್ರಮಗಳು

ಪೋಲೀಸ್ ಇಲಾಖೆಯಲ್ಲಿ ಪೋಲೀಸ್ ಸಿಬ್ಬಂದಿಯ ಕ್ಷೇಮಾಭಿವೃದ್ಧಿ ಮತ್ತು ಕಲ್ಯಾಣಕ್ಕಾಗಿ, ಪೋಲೀಸ್ ಕಲ್ಯಾಣ ನಿಧಿ ಕಾರ್ಯಕ್ರಮಗಳನ್ನು ಹಮ್ಮಿಕ್ರೊಳ್ಳಲಾಗಿದೆ. ಈ ದಿಸೆಯಲ್ಲಿ ೧೯೮೪ರಿಂದ ೧೯೯೫ರವರೆಗೆ ಮಾಡಲ್ಪಟ್ಟ ಖರ್ಚು ಈ ರೀತಿ ಇದೆ.

೧೯೮೪ - ೨೭,೬೧೪ ರೂ. ೧೯೮೫ - ೫೮,೨೫೩ರೂ.

೧೯೮೭ - ೨,೦೩,೨೪೧ ರೂ. ೧೯೮೮ - ೨,೧೪,೨೮೭ ರೂ.

೧೯೮೯ - ೨,೦೩,೫೮೦ ರೂ. ೧೯೯೦ - ೨,೦೧,೬೪೬ ರೂ.

೧೯೯೧ - ೨,೦೮,೨೫೯ ರೂ. ೧೯೯೨ - ೨,೫೬,೨೫೯ ರೂ.

೧೯೯೩ - ೨,೬೦,೮೪೪ ರೂ. ೧೯೯೪ - ೨,೮೧,೪೨೦ ರೂ.

೧೯೯೫ - ೨,೮೦,೮೧೬ ರೂ.

ಸೌಲಭ್ಯಗಳೆಂದರೆ ಒಂದು ಪ್ರತ್ಯೇಕ ಆರೋಗ್ಯಕೇಂದ್ರ, ಹೊಲಿಗೆ ಕೇಂದ್ರ, ಬೆರಳಚ್ಚು ಶಾಖೆ, ಹಿಟ್ಟಿನಗಿರಣಿ, ಗ್ರಂಥಾಲಯ, ಪೋಲಿಸ್ ಸಿಬ್ಬಂದಿ ಮಕ್ಕಳಿಗಾಗಿ ಉದ್ಯಾನವನ, ಈಜುಕೊಳ, ಪೋಲೀಸ್ ಮಕ್ಕಳಿಗಾಗಿ ಪ್ರತ್ಯೇಕ ಶಾಲೆ, ಮತ್ತು ಪೋಲೀಸ್ ಸಿಬ್ಬಂದಿ ಕಲ್ಯಾಣನಿಧಿ. ಈ ಕಲ್ಯಾಣ ನಿಧಿಯಲ್ಲಿ ರೂ. ೪.೨೭ಲಕ್ಷ ಗಡು ಠೇವಣಿ ಇದ್ದು, ೧೯೯೫-೯೬ನೇ ಸಾಲಿನಲ್ಲಿ ೨೨,೮೪೮ ರೂ.ಗಳನ್ನು ಆರ್ಥಿಕ ಸಹಾಯವನ್ನಾಗಿ ನಿವೃತ್ತಿಯಾದ ಪೋಲೀಸ್ ಸಿಬ್ಬಂದಿಗೆ ಕೊಡಲಾಗಿದೆ.

## ಕಾನೂನು ನೆರವು ಮಂಡಳಿ ಗುಲಬರ್ಗಾ

೧೯೮೪-೮೫ ರಿಂದ ೧೯೯೪-೯೫ರವರೆಗೆ ಗುಲಬರ್ಗಾ ಜಿಲ್ಲಾ ಕಾನೂನು ನೆರವು ಮಂಡಳಿಯಿಂದ ವಿಲೇವಾರಿಯಾದ ದಾವಾಗಳ ವಿವರ.

**ಕೋಷ್ಟಕ ೧೦.೧೭**

| ವರ್ಷ | ನೆರವು ಮಂಡಳಿಯಲ್ಲಿ ದಾಖಲಾದ ವ್ಯಾಜ್ಯಗಳು | ತೀರ್ಮಾನವಾದವು | ಕಛೇರಿಯ ಖರ್ಚು |
|---|---|---|---|
| ೧೯೮೪-೮೫ | ೧೭೫ | ೧೫೮ | ೩೬೫೦ |
| ೧೯೮೫-೮೬ | ೭೫ | ೪೧ | ೧೪,೪೬೧ |
| ೧೯೮೬-೮೭ | ೬೦ | ೨೦ | ೧೯,೪೪೧ |
| ೧೯೮೭-೮೮ | ೧೮ | ೨ | ೪೪,೩೪೫ |
| ೧೯೮೮-೮೯ | ೩೪ | ೨೨ | ೨೪,೨೯೭ |
| ೧೯೮೯-೯೦ | ೪೨ | ೮ | ೧೯,೧೧೧ |
| ೧೯೯೦-೯೧ | ೧೪೪ | ೨೬ | ೨೩,೨೮೭ |
| ೧೯೯೧-೯೨ | ೨೦ | ೧೪ | ೨೮,೭೪೧ |
| ೧೯೯೨-೯೩ | ೧೧ | ೪ | ೧೯,೪೫೭ |
| ೧೯೯೩-೯೪ | ೧೦೬ | ೭ | ೧೯,೭೪೮ |
| ೧೯೯೪-೯೫ | ೧೦೯ | ೨ | ೩೮,೩೧೫ |

**ಕೋಷ್ಟಕ ೧೦.೧೮**

ಗುಲಬರ್ಗಾ ಜಿಲ್ಲೆಯಲ್ಲಿ ಲೋಕ ಆದಾಲತ್ ಮೂಲಕ ವಿಲೇವಾರಿ ಆದ ದಾವಾಗಳು
೧೯೮೬ ರಿಂದ ೧೯೯೫ರ ವರೆಗೆ

| ಕ್ರ. ಸಂ. | ದಿನಾಂಕ | ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು | ಮೋಟಾರು ವಾಹನ ನಿಯಮದ | ಒಟ್ಟು ತೀರ್ಮಾನವಾದ ವಾಜ್ಯಗಳು | ನೀಡಿದ ಪರಿಹಾರ ರೂ. |
|---|---|---|---|---|---|
| ೧. | ೨೯-೧೨-೮೬ | -- | ೧೭ | ೧೭ | ೧,೭೩,೦೦೦ |
| ೨. | ೨೮-೮-೮೮ | ೧೧೦ | ೫೪ | ೧೬೪ | ೯,೫೦,೦೬೧ |
| ೩. | ೩೦-೬-೯೦ | ೪೫ | -- | ೪೫ | -- |
| ೪. | ೨೬-೮-೯೦ | ೧೧ | ೬೮ | ೭೯ | ೨,೫೦,೭೫೦ |
| ೫. | ೨೪-೨-೯೧ | ೫೭೧ | ೭೦ | ೬೪೧ | ೨೦,೭೯,೨೩೦ |
| ೬. | ೧೧-೧೨-೯೧ | ೧೨೭ | ೮೧ | ೨೦೮ | ೨೩,೫೮,೨೦೦ |
| ೭. | ೮-೨-೯೨ | ೧೮೦ | ೫೯ | ೨೩೯ | ೧೫,೪೫,೪೦೦ |
| ೮. | ೨೨-೩-೯೨ | ೨೭ | ೩೩ | ೬೦ | ೧೧,೨೧,೦೦೦ |
| ೯. | ೨೭-೪-೯೨ (ಕಾರ್ಮಿಕ) | ೨೬ | ೩ | ೨೫ | ೧೦೦೦ |
| ೧೦. | ೨-೧೦-೯೨ | ೩೮ | ೬೬ | ೧೦೪ | ೧೩,೫೦,೧೫೦ |
| ೧೧. | ೩೧-೧-೯೩ | ೩೧ | ೩೬ | ೬೭ | ೧೦,೮೫,೭೩೫ |
| ೧೨. | ೨೪-೯-೯೩ | -- | ೭೯ | ೭೯ | ೧೭,೫೮,೫೦೦ |
| ೧೩. | ೧೬.೯-೯೩ | -- | ೧೭೪೧ | ೧೭೪೧ | ೩,೨೪,೦೦೦ |
| ೧೪. | ೨೫-೧--೯೪ | ೧೪ | ೧೪೫ | ೧೫೯ | ೨೧,೯೧,೮೫೦ |
| ೧೫. | ೨೫-೩-೯೫ | ೩೫ | ೯೦ | ೧೨೫ | ೨೪,೯೨,೦೦೦ |
| ೧೬. | ೧೭-೯-೯೫ | ೪೬ | ೧೧೪ | ೧೬೦ | ೨೫,೨೬,೩೦೦ |

(ಆಧಾರ : ಜಿಲ್ಲಾ ಕಾನೂನು ನೆರವು ಕೇಂದ್ರ, ಗುಲಬರ್ಗಾ)

**ಕಾರಾಗೃಹಗಳು**

ಗುಲಬರ್ಗಾ ಪಟ್ಟಣದಲ್ಲಿ ಬಹಳ ಹಿಂದಿನಿಂದಲೂ ಅಂದರೆ ಬಹುಮನಿ ಸುಲ್ತಾನರ ಆಳ್ವಿಕೆಯ ಕಾಲದಿಂದಲೂ ಕಾರಾಗೃಹವಿದ್ದ ದಾಖಲೆಗಳಿವೆ. ಇವುಗಳು ಆಗಿನ ಚಕ್ರವರ್ತಿ, ರಾಜ ಇವರ ಅಧೀನದಲ್ಲಿದ್ದಿತು. ಗುಲಬರ್ಗಾವು ಬಹುಮನಿ ಸುಲ್ತಾನರ ರಾಜಧಾನಿಯಾಗಿದ್ದು, ಇಲ್ಲಿನ ಕಾರಾಗೃಹವು ಆಗಿನ ಕಾಲದ ವಿಧಾನಗಳಲ್ಲಿನ ಆಡಳಿತ ವ್ಯಾಪ್ತಿಯಲ್ಲತ್ತು. ಒಬ್ಬ ಖೈದಿಯನ್ನು ಅವನ ಜೈಲುವಾಸದ ಸಂಪೂರ್ಣ ಅವಧಿಯನ್ನು ಶೃಂಖಲೆಯಿಂದ (ಕಾಲಿನಬೇಡಿ) ಬಂಧಿಸಿ ಇಡಲಾಗುತ್ತಿತ್ತು. ಅವರಿಗೆ ಶಿಕ್ಷೆಯು ಬಹಳ ಕ್ರೂರವಾದ್ದವು. ಈ ಪರಿಸ್ಥಿತಿಯಿಂದ, ಇತ್ತೀಚಿನ ಪರಿಸ್ಥಿತಿಗೆ ಬರಲು ಜೈಲು ನಿಯಮಾವಳಿಗಳಲ್ಲಿ ಅನೇಕ ಸುಧಾರಣೆಗಳಾದವು. ೧೮೫೭ರಲ್ಲಿ ಆಗಿನ ನಿಜಾಮ ಸರ್ಕಾರದ ಕಾರಾಗೃಹಗಳ ಡೈರೆಕ್ಟರ್ ಜನರಲ್ ಆಗಿದ್ದ ಹ್ಯಾಂಕಿನ್ ಎಂಬುವವರು ಕಾರಾಗೃಹದ ಸುಧಾರಣೆಗಳನ್ನು ಈ ಪ್ರದೇಶದಲ್ಲಿ ಮಾಡಿದವರಲ್ಲಿ ಮೊದಲಿಗರೆಂದು ಹೇಳಬಹುದು. ಅವರು (ಹ್ಯಾಂಕಿನ್) ಕಾರಾಗೃಹ ಆಡಳಿತದ ನೂತನ ವಿಧಾನವನ್ನು ಪ್ರಾರಂಭಿಸಿದವರಾಗಿದ್ದರು. ಕಾರಾಗೃಹಗಳಿಗಾಗಿ ಒಂದು ಕೈಪಿಡಿಯನ್ನು ತಯಾರಿಸಿದರು. ಇದರಂತೆ, ಖೈದಿಗಳಿಗೆ ಕಾರಾಗೃಹದಲ್ಲಿ ಸಂಜೆ ಮನೋರಂಜನೆ, ಹಾಗೂ ಪೆರೋಲ್ ಮೇಲೆ ಬಿಡುಗಡೆ ಮಾಡುವ ಕ್ರಮ, ಮೊದಲಾದವನ್ನು ಜಾರಿಗೆ ತಂದರು ಮತ್ತು ಬಿಡುಗಡೆಯಾದ ಖೈದಿಗಳಿಗಾಗಿ ಒಂದು ಸಹಕಾರ ಸಂಘವನ್ನು ಸ್ಥಾಪಿಸದರು. ನಂತರದ ದಿನಗಳಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಜೈಲಿನ ಸುಧಾರಣೆ ಬಗ್ಗೆ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಗುಲಬರ್ಗಾದಲ್ಲಿ ಪಟ್ಟಣದ ಮಧ್ಯೆ ಸೂಪರ್ ಮಾರ್ಕೆಟ್ ಪ್ರದೇಶದಲ್ಲಿ ಕೇಂದ್ರ ಕಾರಾಗೃಹ ಇದ್ದಿತು. ಈ ಕಾರಾಗೃಹವು ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಮೂರು ಜಿಲ್ಲೆಗಳಿಗೆ ಒಳಪಟ್ಟಿತ್ತು. ಜಿಲ್ಲೆಯಲ್ಲಿ ಉಪ ಬಂದಿಖಾನೆಗಳಾಗಲೀ, ಲಾಕ್‌ಅಪ್‌ಗಳಾಲೀ (ಪೋಲೀಸ್ ಠಾಣೆಯಲ್ಲಿದ್ದ ಲಾಕಆಪ್‌ಗಳನ್ನು ಹೊರತು) ಇರಲಿಲ್ಲ. ಈ ಕೇಂದ್ರ ಕಾರಾಗೃಹವು ೭೦ ಎಕರೆ ಪ್ರದೇಶದಲ್ಲಿದ್ದು, ೭೫೦ ಎಲ್ಲಾ ವಿಧವಾದ ಖೈದಿಗಳಿಗೆ ಇರಲು ಅವಕಾಶವಿದ್ದಿತು. ಹಾಗೂ ೪೦ ಹಾಸಿಗೆಯ ಆಸ್ಪತ್ರೆ ಇದ್ದಿತು. ಈ ಕಾರಾಗೃಹದ ಆಡಳಿತ ವ್ಯವಸ್ಥೆಯು ಹೈದರಾಬಾದ್ ಪ್ರಿಸನ್ ರೂಲ್ಸ್ ೧೯೫೫ ಹೈದರಾಬಾದ್ ಜೈಲ್ ಮ್ಯಾನುಯಲ್) ಇದರ ವ್ಯಾಪ್ತಿಯೊಳಗಿದ್ದಿತು. ಖೈದಿಗಳನ್ನು ಎ, ಬಿ ಮತ್ತು ಸಿ ಎಂದು ಮೂರು ವಿಧವಾಗಿ ಅವರ ಪೂರ್ವ ನಡತೆ ಹಾಗೂ ಬಂದಿಖಾನೆಯಲ್ಲಿ ಅವರ ನಡತೆಯ ಮೇಲೆ ಅವಲಂಬಿಸಿ ವಿಂಗಡಿಸಲಾಗಿತ್ತು. ಈ ಖೈದಿಗಳನ್ನು ನಿಗದಿತ ಅವಧಿಗಳಲ್ಲಿ, ಪರಿವೀಕ್ಷಿಸಿ ಅವರ ವ್ಯಕ್ತಿತ್ವದ ಬಗ್ಗೆ ಇರುವ ನಮೂನೆಗಳಲ್ಲಿ ದಾಖಲ್ಮಾಡುತ್ತಿದ್ದರು. ವರ್ಗೀಕೃತ ಖೈದಿಗಳನ್ನು ಪ್ರತ್ಯೇಕ ಕಾರಾಗೃಹಗಳಲ್ಲಿನ ಕೋಣೆಗಳಲ್ಲಿ ಇಡುತ್ತಿದ್ದರು. ಪ್ರತೀ ವರ್ಗದವರಿಗೂ ಬೇರೆ ಬೇರೆ ಬಣ್ಣದ ಗುರುತಿನ ಚೀಟಿಗಳನ್ನು ನೀಡುತ್ತಿದ್ದರು. ೧೯೭೫ನೇ ಡಿಸೆಂಬರ್ ಹೊತ್ತಿಗೆ 'ಎ' ವರ್ಗದ ೧೪೦, ಬಿ ವರ್ಗದ ೩೭೭ ಸಿ ವರ್ಗದ ೧೦ ಖೈದಿಗಳ ಮತ್ತು ೨೩ ಮಹಿಳಾ ಖೈದಿಗಳು ಗುಲಬರ್ಗಾ ಕಾರಾಗೃಹದಲ್ಲಿದ್ದರು.

ಮಹಿಳಾ ಖೈದಿಗಳಿಗೆ ಪ್ರತ್ಯೇಕ ಕೊಠಡಿಗಳಿದ್ದು, ಅವರಿಗೆ ಪುರುಷ ಖೈದಿಗಳು ಮಾಡುವ ಕಾರ್ಯಗಳ ೨/೩ ರಷ್ಟು ಕಾರ್ಯಗಳನ್ನು ಮಾಡಲು ಕೊಡುತ್ತಿದ್ದರು. ಮಹಿಳಾ ಖೈದಿಗಳಿಗೆ ಹೈದರಾಬಾದ್ ಜೈಲ್ ಮ್ಯಾನ್ಯುಯಲ್‌ನಲ್ಲಿರುವಂತೆ (ಅಧ್ಯಾಯ ೨೦) ನಿಯಮಗಳನ್ನು ಪಾಲಿಸುತ್ತಿದ್ದರು. ಈ ಕಾರಾಗೃಹದಲ್ಲಿ ಮರಣದಂಡನೆ ವಿಧಿಸುತ್ತಿರಲ್ಲಲ್ಲ. ಮರಣ ದಂಡನೆಗಾಗಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಖೈದಿಗಳನ್ನು ಕಳುಹಿಸುತ್ತಿದ್ದರು.

ನಂತರ ಈ ಕೇಂದ್ರ ಕಾರಾಗೃಹವನ್ನು ಸೂಪರ್ ಮಾರ್ಕೆಟ್ ಆಗಿ ಬದಲಾಯಿಸಲು ಸರ್ಕಾರ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯ ಶಿಫಾರಸಿನಂತೆ ಒಂದು ಸೂಪರ್ ಮಾರ್ಕೆಟನ್ನು ರಚಿಸಿ, ಕಾರಾಗೃಹವನ್ನು ಜೇವರ್ಗಿ ರಸ್ತೆಯ ಬದಿಯಲ್ಲಿನ ವಿಶಾಲವಾದ ಸ್ಥಳಕ್ಕೆ ಬದಲಾವಣೆ ಮಾಡಲಾಯಿತು. ಕೇಂದ್ರ ಕಾರಾಗೃಹ - ಗುಲಬರ್ಗಾದಲ್ಲಿ ತಯಾರಿಸಿದ ಜಮಖಾನೆಗಳು ಮೊದಲಿನಿಂದಲೂ ಪ್ರಸಿದ್ಧವಾಗಿವೆ. ಈಗಲೂ ಜೈಲುಕಂಬಳಿ ಪ್ರಸಿದ್ಧವಾಗಿದೆ.

೧೯೭೪-೭೫ರಲ್ಲಿ ಇಲ್ಲಿ ೪ ಜೇಫವಾರ್ಡರ್‌ಗಳು, ೯ ಎಳು ಹೆಚ್ ವಾರ್ಡರ್‌ಗಳು, ೧೦೫ ಪುರುಷ ವಾರ್ಡರ್‌ಗಳು ಮತ್ತು ನಾಲ್ಕು ಸ್ತ್ರಿ ವಾರ್ಡರ್‌ಗಳಿದ್ದರು. ಬಂದೀಖಾನೆಯಲ್ಲಿನ ಅಧಿಕ ಅವಧಿಯ ಖೈದಿಗಳ ಬಗ್ಗೆ ಪುನರ್ ವಿಮರ್ಶೆ ಮಾಡಲು ಒಂದು ಸಲಹಾ ಸಮಿತಿ ಇದ್ದಿತು. ಈ ಸಮಿತಿಗೆ ಜಿಲ್ಲೆ ಸತ್ರ ನ್ಯಾಯಾಧೀಶರು ಅಧ್ಯಕ್ಷರಾಗಿದ್ದರು. ಮತ್ತು ಜಿಲ್ಲಾ ದಂಡಾಧಿಕಾರಿ, ಜಿಲ್ಲಾಧಿಕಾರಿ, ಪೋಲೀಸ್ ಅಧೀಕ್ಷಕರು, ಹಾಗೂ ಇಬ್ಬರು ಅಧಿಕಾರಿಯೇತರ ವ್ಯಕ್ತಿಗಳನ್ನು ನಾಮಕರಣ

ಸದಸ್ಯರನ್ನಾಗಿ ನೇಮಿಸುತ್ತಿದ್ದರು. ಈ ಸಾಲಿನಲ್ಲಿ ಈ ಕಾರಾಗೃಹದ ವರಮಾನ ರೂ. ೧,೮೩,೫೩೦ ಮತ್ತು ಖರ್ಚು ರೂ. ೭,೭೬,೮೭೭ ಆಗಿದ್ದಿತು. ಕಾರಾಗೃಹದ ಇತ್ತೀಚಿನ ಮಾಹಿತಿ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

### ಕೇಂದ್ರ ಕಾರಾಗೃಹ (ಗುಲಬರ್ಗಾ)

ಗುಲಬರ್ಗಾದ ಈಗಿನ ಸೂಪರ್ ಮಾರ್ಕೆಟ್ ಬಳಿ ಇದ್ದ ಕಾರಾಗೃಹವನ್ನು ೧೯೬೮-೬೯ರಲ್ಲಿ ಸ್ಥಳಾಂತರಿಸಲಾಯಿತು. ಒಳವಿಸ್ತೀರ್ಣ ೨೮ ಎಕರೆ ಮತ್ತು ಹೊರ ವಿಸ್ತೀರ್ಣ ೬೩ ಎಕರೆ ಇರುವ ಈ ಕಾರಾಗೃಹದಲ್ಲಿ ೬೩೦ ಪುರುಷ ಖೈದಿ ಮತ್ತು ೨೦ ಮಹಿಳಾ ಖೈದಿಗಳಿಗೆ ಸ್ಥಳಾವಕಾಶವಿದೆ. ೧೯೮೫-೮೬ರಿಂದ ೧೯೯೪-೯೫ರ ವರೆಗೆ ಈ ಕಾರಾಗೃಹದಲ್ಲಿದ್ದ ಕೈದಿಗಳ ಸಂಖ್ಯೆ ಹೀಗಿದೆ.

೧೯೮೫-೮೬ - ೩೩೫೩ (ಪು) ೮೩ (ಮಹಿಳೆಯರು)

೧೯೮೬-೮೭ - ೨೦೮೮, (೬೬)

೧೯೮೭-೮೮ - ೨೮೪೪, (೭೦)

೧೯೮೮-೮೯ - ೨೧೧೩, (೬೧)

೧೯೮೯-೯೦ - ೨೭೨೧ (೫೧)

೧೯೯೦-೯೧ - ೨೦೩೧, (೧೨೨)

೧೯೯೧-೯೨ - ೨೦೬೬ - (೮೧)

೧೯೯೩-೯೪ - ೨೯೪೨, (೮೭)

೧೯೯೪-೯೫ - ೨೬೨೩, (೯೧)

ಈ ಕಾರಗೃಹದಲ್ಲಿ ೧೯೯೦-೯೧ ರಿಂದ ೧೯೯೪-೯೫ರ ವರೆಗೆ ಆದ ಖರ್ಚು (ಲಕ್ಷ ರೂ. ಗಳಲ್ಲಿ) ಮತ್ತು ಪ್ರತಿ ಬಂದಿಗೆ ತಗುಲಿದ ಖರ್ಚು (ರೂ.ಗಳಲ್ಲಿ) ಈ ರೀತಿ ಇದೆ.

೧೯೯೦-೯೧ - ೩೫.೩೮; ೧೨,೪೬೦

೧೯೯೧-೯೨ - ೪೩.೦೮; ೧೨,೧೦೦

೧೯೯೨-೯೩ - ೪೭.೮೨; ೧೨,೩೫೫

೧೯೯೩-೯೪ - ೫೫.೨೮; ೧೩,೦೩೬

೧೯೯೪-೯೫ - ೬೦.೮೪; ೧೫,೧೭೦

ಇಲ್ಲಿ ಒಟ್ಟು ೧೫೬ ಮಂದಿ ಸಿಬ್ಬಂದಿ ಇದ್ದಾರೆ.

### ತಾಲೂಕು ಉಪ ಕಾರಾಗೃಹ - ಯಾದಗಿರಿ

ಈ ಉಪ ಕಾರಾಗೃಹವು ೧೯೭೭ ಮೇ ನಲ್ಲಿ ಪ್ರಾರಂಭವಾಯಿತು. ಸುಮಾರು ೨೦ ರಿಂದ ೨೫ ಪುರುಷ ಮತ್ತು ಮಹಿಳಾ ಕೈದಿಗಳಿಗೆ ಪ್ರತ್ಯೇಕವಾಗಿ ಸ್ಥಳಾವಕಾಶವಿದೆ. ೧೯೮೫-೮೬ ರಿಂದ ೧೯೯೪-೯೫ರ ವರೆಗೆ ಈ ಬಂಧಿಖಾನೆಯಲ್ಲಿದ್ದ ಪುರುಷ ಮತ್ತು ಮಹಿಳಾ ಖೈದಿಗಳ ಸಂಖ್ಯೆ ಹೀಗಿದೆ.

೧೯೮೫-೮೬ - ೮೮ (೦೨)

೧೯೮೬-೮೭ (೦೫)

೧೯೮೭-೮೮ - ೧೦೦ (೦೯)

೧೯೮೮-೮೯ - ೭೧ (೦೫)

೧೯೮೯-೯೦ - ೯೪ (೦೯)

೧೯೯೦-೯೧ - ೧೦೧ (೧೧)

೧೯೯೧-೯೨ - ೧೩೦ (೦೯)

೧೯೯೨-೯೩ - ೧೨೮ (೦೬)

೧೯೯೩-೯೪ - ೧೮೦ (೧೫)

೧೯೯೪-೯೫ - ೧೦೮ (೦೩)

ಈ ಬಂದೀಖಾನೆಯಲ್ಲಿ ೧೯೯೦-೯೧ ರಿಂದ ೧೯೯೪-೯೫ರ ವರೆಗೆ ಆದ ಖರ್ಚು (ಲಕ್ಷ ರೂ. ಗಳಲ್ಲಿ) ಮತ್ತು ಪ್ರತಿ ಬಂಧಿಗೆ ತಗಲಿದ ಖರ್ಚು (ರೂ.ಗಳಲ್ಲಿ) ಈ ರೀತಿ ಇದೆ.

೧೯೯೦-೯೧ - ೧.೮೧ (೧,೬೭೦; ೧೯೯೧-೯೨- ೨.೦೦ (೧,೫೩೨)

೧೯೯೨-೯೩ - ೧.೯೧ (೧,೫೩೯); ೧೯೯೩-೯೪ - ೨.೬೨ (೧,೭೫೫)

೧೯೯೪-೯೫ - ೩.೬೩ (೧,೮೮೦);

**ತಾಲೂಕು ಉಪ ಕಾರಾಗೃಹ - ಆಳಂದ**

ಈ ಕಾರಾಗೃಹವು ಮೇ ೧೯೭೭ರಲ್ಲಿ ಪ್ರಾರಂಭವಾಯಿತು. ತಹಶೀಲದಾರ್ ಕಛೇರಿಯಲ್ಲಿ ಎರಡು ಕೋಣೆಯಲ್ಲಿ ಸುಮಾರು ೧೫ (೫ ಮಹಿಳೆಯರು ಸೇರಿದಂತೆ) ಕೈದಿಗಳಿಗೆ ಸ್ಥಳಾವಕಾಶವಿದೆ. ಈ ೧೯೮೫-೮೬ ರಿಂದ ೧೯೯೪-೯೫ರ ವರೆಗೆ ಇದ್ದು ಪುರುಷ ಕೈದಿಗಳ ಸಂಖ್ಯೆ ಈ ರೀತಿ ಇದೆ.

೧೯೮೫-೮೬ (೫೬); ೧೯೮೬-೮೭ (೧೭೪); ೧೯೮೭-೮೮ (೧೫೭);

೧೯೮೮-೮೯ (೧೩೦); ೧೯೮೯-೯೦ (೧೨೯); ೧೯೯೦-೯೧ (೧೩೪);

೧೯೯೧-೯೨ (೧೫೩); ೧೯೯೨-೯೩ (೧೫೭); ೧೯೯೩-೯೪ (೧೬೫);

೧೯೯೪-೯೫ (೧೧೩)

ಇಲ್ಲಿ ೧೯೯೦-೯೧ ರಿಂದ ೯೪-೯೫ರ ವರೆಗೆ ಆದ ಖರ್ಚು ಈ ರೀತಿ ಇದೆ. (ಲಕ್ಷ ರೂ. ಗಳಲ್ಲಿ)

೧೯೯೦-೯೧ (೧.೨೬); ೧೯೯೧-೯೨ (೧.೬೧); ೧೯೯೨-೯೩ (೧.೯೫); ೧೯೯೩-೯೪ (೩..೨೯); ೧೯೯೪-೯೫ (೨.೯೦); ಮತ್ತು ಪ್ರತಿ ಬಂದಿಗೆ ೧೯೯೪-೯೫ ರಲ್ಲಿ ಆದ ಖರ್ಚು ರೂ. ೨೮,೨೫೩.

**ತಾಲೂಕು ಉಪ ಕಾರಾಗೃಹ - ಸುರಪುರ**

ತಾಲೂಕು ಉಪ ಕಾರಾಗೃಹ ಮೇ ೧೯೭೭ ರಲ್ಲಿ ಪ್ರಾರಂಭವಾಯಿತು. ಸುಮಾರು ೧೦ ಪುರುಷ ಮತ್ತು ೧೦ ಸ್ತ್ರೀ ಖೈದಿಗಳಿಗೆ ಸ್ಥಳಾವಕಾಶವಿದೆ. ಇಲ್ಲಿ ೧೯೮೫-೮೬ ರಿಂದ ೧೯೯೪-೯೫ರ ವರೆಗೆ ಇದ್ದ ಪುರುಷ ಮತ್ತು ಮಹಿಳಾ ಕೈದಿಗಳ ಸಂಖ್ಯೆ ಈ ರೀತಿ ಇದೆ.

೧೯೮೫-೮೬ - ೨೭೫ (೧೦) ; ೧೯೮೬-೮೭ - ೧೬೨ (೦೧)

೧೯೮೭-೮೮ - ೧೫೫ (೦೫) ; ೧೯೮೮-೮೯ - ೨೦೮ (೦೬)

೧೯೮೯-೯೦ - ೨೮೬ (೨೫) ; ೧೯೯೦-೯೧ - ೨೦೧ (೦೩)

೧೯೯೧-೯೨ - ೨೧೯ (೩) ; ೧೯೯೨-೯೩ - ೧೯೦ (೮)

೧೯೯೩-೯೪ - ೨೮೮ (೩) ; ೧೯೯೪-೯೫ - ೧೫೧ (೧೨)

ಇಲ್ಲಿ ಒಟ್ಟು ೭ ಸಿಬ್ಬಂದಿ ಇದ್ದಾರೆ, ೧೯೯೦-೯೧ ರಿಂದ ೧೯೯೪-೯೫ರ ವರೆಗೆ ಕಾರಾಗೃಹದಲ್ಲಿ ಆದ ಖರ್ಚು (ಲಕ್ಷ ರೂ.ಗಳಲ್ಲಿ) ಮತ್ತು ಪ್ರತಿ ಬಂದಿಗೆ ಆದ ಖರ್ಚು (ರೂ.ಗಳಲ್ಲಿ) ಈ ರೀತಿ ಇದೆ.

೧೯೯೦-೯೧ - ೧.೬೭ (೨೬೬); ೧೯೯೧-೯೨ - ೨.೧೦ (೩೯೫)

೧೯೯೨-೯೩ - ೨.೮೯ (೬೩೯); ೧೯೯೩-೯೪ - ೨.೮೦ (೫೧೬)

೧೯೯೪-೯೫ - ೩.೧೨ (೮೮೭).

## ತಾಲೂಕು ಉಪ ಕಾರಾಗೃಹ - ಸೇಡಂ

ಕಾರಾಗೃಹವು ೧೯೮೩-೮೪ರಲ್ಲಿ ಪ್ರಾರಂಭವಾಯಿತು. ಇದು ಜೆ.ಎಂ.ಎಫ್.ಸಿ. ನ್ಯಾಯಾಲಯದ ಆವರಣದಲ್ಲಿದೆ. ೧೯೮೫-೮೬ ರಿಂದ ೧೯೯೩-೯೪ರ ವರೆಗೆ ಇದು ಪುರುಷ ಖೈದಿಗಳ ಸಂಖ್ಯೆ ಹೀಗಿದೆ. ೧೯೮೫-೮೬ (೪೩) ; ೧೯೮೬-೮೭ (೫೭) ; ೧೯೮೭-೮೮ (೧೬೯) ; ೧೯೮೮-೮೯ (೫೯); ೧೯೮೯-೯೦ (೧೦೧); ೧೯೯೧-೯೨ (೧೪೨) ; ೧೯೯೨-೯೩ (೧೭೭); ೧೯೯೩-೯೪ (೧೯೧);

ಇಲ್ಲಿ ಪ್ರತಿ ಬಂಧಿಗೆ ದಿನಕ್ಕೆ ೧೦ ರೂ. ಖರ್ಚು ಮಾಡಲಾಗುತ್ತಿದೆ.

## ಅಭಿಯೋಜನ ನಿರ್ದೇಶನಾಲಯ :

ರಾಜ್ಯ ಸರ್ಕಾರವು ಕಾನೂನು ಆಯೋಗದ ೧೪ನೇ ಮತ್ತು ೪೧ನೇ ವರದಿಗಳಲ್ಲಿ ಇರುವ ಶಿಫಾರಸುಗಳನ್ನು ಆಧರಿಸಿ, ಹೀನಾಪರಾಧಗಳ ಪ್ರಕರಣಗಳನ್ನು ಪರಿಣಾಕಾರೀ ಅಭಿಯೋಜನಕ್ಕಾಗಿ ಒಂದು ಪ್ರತ್ಯೇಕ ಮತ್ತು ಸ್ವತಂತ್ರವಾದ ಅಭಿಯೋಜನಾ ನಿರ್ದೇಶನಾಲಯವನ್ನು ಸ್ಥಾಪಿಸುವ ಕಾರ್ಯ ಕ್ರಮ ಕೈಗೊಂಡಿತ್ತು. ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಅಭಿಯೋಜನೆ ನಡೆಯಲು ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಯನ್ನು ಸೃಷ್ಟಿಸುವ ಜೊತೆಗೆ, ಪೋಲೀಸ್ ಸೂಪರಿಂಟೆಂಡೆಂಟ್‌ರ ಕಛೇರಿಗಳಲ್ಲಿಯಾ ಸಹಾಯಕ ನಿರ್ದೇಶಕರು ಇದ್ದರೆ ಈ ಸಹಾಯಕ ನಿರ್ದೇಶಕರು ಪೋಲೀಸ್ ಸೂಪರಿಂಟೆಂಡೆಂಟ್‌ರಿಂದ ತಮಗೆ ಕಳುಹಿಸಲ್ಪಟ್ಟ ಎಲ್ಲ ಕಾನೂನು ವಿಷಯಗಳಲ್ಲಿ ಸಂಪರ್ಕಾಧಿಕಾರಿಯೂ ಕೆಲಸ ಮಾಡುತ್ತಾರೆ.

ಇವರ ಕಾರ್ಯಗಳು ಹೀಗಿವೆ. ೧) ರಾಜ್ಯದ ಪರವಾಗಿ ಮ್ಯಾಜಿಸ್ಟ್ರೇಟರ ಮತ್ತು ಸೆಷೆನ್ಸ್ ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಅಭಿಯೋಜನೆ ನಡೆಸಲು ಏರ್ಪಾಡು ಮಾಡುವುದು ೨) ಪೋಲೀಸ್ ಇಲಾಖೆಯ ತನಿಖಾ ಅಧಿಕಾರಿಗಳಿಗೆ ಮತ್ತು ತನಿಖೆ ಮಾಡುವ ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಅಧಿಕಾರಿಗಳಿಗೆ ಸಲಹೆ ನೀಡುವುದು ಮತ್ತು ಮಾರ್ಗದರ್ಶನ ಮಾಡುವುದು ೩) ಮ್ಯಾಜಿಸ್ಟ್ರೇಟರು ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯಗಳು ನೀಡಿದ ಖುಲಾಸೆ ಮತ್ತು ವಜಾ ತೀರ್ಪುಗಳನ್ನು ಮತ್ತು ಆದೇಶಗಳನ್ನು ಪರಿಶೀಲಿಸುವುದು ಮತ್ತು ಯೋಗ್ಯ ಪ್ರಕರಣಗಳಲ್ಲಿ ಖುಲಾಸೆ ಮತ್ತು ವಜಾ ತೀರ್ಮಾನಗಳ ಮತ್ತು ಆದೇಶಗಳ ವಿರುದ್ಧ ಪ್ರಸಂಗವಿದ್ದಂತೆ ಅಪೀಲು ಅಪೀಲು ಅಥವಾ ಪುನರೀಕ್ಷಣಿಯ ಅರ್ಜಿಗಳನ್ನು ಸಲ್ಲಿಸುವಂತೆ ಶಿಫಾರಸು ಮಾಡುವುದು. ೪) ಸರ್ಕಾರವು ನಿರ್ದೇಶನಾಲಯಕ್ಕೆ ಉಲ್ಲೇಖಿಸಿದಾಗ ಅಭಿಯೋಜನೆಯನ್ನು ಹಿಂತೆಗೆದುಕೊಳ್ಳುವುದೂ ಸೇರಿದಂತೆ ಕ್ರಿಮಿನಲ್ ಪ್ರಕರಣಗಳ ತನಿಖೆ ಮತ್ತು ಅಭಿಯೋಜನೆಯ ಎಲ್ಲಾ ವಿಷಯಗಳಲ್ಲಿ ಸಾಮಾನ್ಯವಾಗಿ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಸಲಹೆ ನೀಡುವುದು. ಗುಲಬರ್ಗಾದಲ್ಲಿ ಅಭಿಯೋಜನಾ ನಿರ್ದೇಶನಾಲಯದ ಸಹ-ನಿರ್ದೇಶಕರ ಕಛೇರಿ ಇದೆ. (ವಿವರಗಳಿಗೆ ಇತರ ಇಲಾಖೆಗಳು - ಅಧ್ಯಾಯ ನೋಡಿ).

## ಪೋಲೀಸ್ ತರಬೇತಿ ಶಾಲೆ

ಗುಲಬರ್ಗಾದಲ್ಲಿ ರಾಜ್ಯದ ೩ನೇ ಪೋಲೀಸ್ ತರಭೇತಿ ಶಾಲೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಗುಲಬರ್ಗಾದ ದಕ್ಷಿಣದಲ್ಲಿರುವ ನಾಗನಹಳ್ಳಿ ಗ್ರಾಮದಲ್ಲಿ ಜಮೀನನ್ನು ೧೯೯೨ರಲ್ಲಿ ಸ್ವಾಧೀನ ಪಡೆದುಕೊಳ್ಳಲಾಗಿದೆ. ಈ ಉದ್ದೇಶಿತ ಶಾಲೆಯಲ್ಲಿ ೫೦೦ ಪೋಲೀಸರಿಗೆ ತರಭೇತಿ ನೀಡುವ ಯೋಜನೆಯಿದೆ.